
ನಮ್ಮ ಮಾನಸ

ಸಂಪುಟ : 3 ಮೇ 2009 ಸಂಚಿಕೆ : 1



ನಮ್ಮ ಮಾನಸ

ಮೇ 2009

ಸಂಪುಟ : 3　　ಸಂಚಿಕೆ : 1

Editor, Printer and Publisher
Rajeshwari H.S.,
No. 114/5, 9th Cross, 2nd Main
Chamarajpet, Bangalore - 560 018.
Mobile : 9449345698

Printed at
ILA Mudrana
No. 36, 40 Ft. Road, Raghavanagara
New Timberyard Layout, Bangalore-26.
✆ : 26757159

ಚಂದಾ ವಿವರ

ಬಿಡಿಪ್ರತಿ	**8–00 ರೂ.**
ವಾರ್ಷಿಕ ಚಂದಾ (ವಿಶೇಷ ಸಂಚಿಕೆಯೊಂದಿಗೆ)	**100–00 ರೂ.**
ಸಂಸ್ಥೆಗಳಿಗೆ	**150–00 ರೂ.**

ನಮ್ಮ ಮಾನಸ

114/5, 9ನೇ ತಿರುವು, 2ನೇ ಮುಖ್ಯರಸ್ತೆ,
ಚಾಮರಾಜಪೇಟೆ, ಬೆಂಗಳೂರು – 560 018

ಚಂದಾಹಣವನ್ನು ಈ ವಿಳಾಸಕ್ಕೆ ಚೆಕ್ ಅಥವಾ ಡಿ.ಡಿ. ಮೂಲಕ ಕಳಿಸಬಹುದು

– – –

ಮೈಸೂರಿನಲ್ಲಿ ಓದುಗರು ಪ್ರತಿಗಳಿಗೆ ಹಾಗೂ ಚಂದಾ ನವೀಕರಣಕ್ಕೆ ಸಂಪರ್ಕಿಸಿ


ವೆಂ. ವನಜ
2329, 12ನೇ ಮೈನ್, 2ನೇ ಹಂತ,
ವಿಜಯನಗರ, ಮೈಸೂರು – 570 017

ಪ್ರಾರಂಭ : 'ಮಾನುಷಿ' (1985ರಲ್ಲಿ),
ಅನಂತರ 'ಮಾನಸ',
ಈಗ 'ನಮ್ಮ ಮಾನಸ'

ಕಾಡು ಹುಡುಗಿಯರ ಹಾಡು

ಚಿಕ್ಕಿ ಬೀರಿದ ಪರಾಗ, ಬಿಸಿಲ ಸುರಭಿ
ಮಳೆ ತಂದ ಬಿಸುಪು ಗಾಳಿ ಹಾಡಿಗೆ
ಜೇನರೆಕ್ಕೆಯ ತಾಳಗತಿ ಹಿಡಿದು
ಹೊರಟರು ಕಾಡಿಗೆ ಹುಡುಗಿಯರು

ಮಧು ತುಂಬಿಸಿದ ಕನಸುಗಳ ಬೀಜ ಬಿತ್ತಿ
ಅರಸು ಕುವರರ ಆದರ್ಶ ಸಾಮ್ರಾಜ್ಯ ಕಟ್ಟಿ
ಅವರಿಟ್ಟ ಹೆಜ್ಜೆ ಜಾಡಲ್ಲೆ ನಡೆದರಲ್ಲೊ
ಏನಿತ್ತೊ ಅವರ ಬಯಕೆ?



ಇಲ್ಲಿ ನಗರದ ಕೋಟೆಗಳಲ್ಲೇ
ಅಳುವ ಕಂದಗಳ ತಟ್ಟಿ
ಜೋಗುಳ ಹಾಡುವ ಅಮ್ಮಂದಿರು
ಹಾಸಿ ಹೊದೆವಷ್ಟು ನೀತಿ
ನಿಯಮಗಳಿದ್ದವಲ್ಲಾ
ಏನಿತ್ತೊ ಒಳಗೇ ಕೊರತೆ

ಯಾವ ರಾಮನೊ ನಳನೊ
ಸತ್ಯವಂತ ಸೂರೆಗೈದದ್ದಕ್ಕೆ ಹೃದಯ ಕುಂಭ
ಹಿಡಿದರೇ ಇವರು ರಕ್ತ ಒಸರಿಸುವ ನೆಲದ ಹಾದಿ?
ಹೊತ್ತರೇ ಮಂಜುಗಣ್ಣಲ್ಲಿ ಸಂಕಟದ ಬೆಟ್ಟ?

ಮಣ್ಣಾಗಿ ಪಡೆದರೂ ಗರತಿ ಪದವಿ ಪಟ್ಟ
ಇದ್ದಿರಬೇಕು ಅವರ ಹಸಿ ಎದೆಗಳಲ್ಲಿ
ಸಾವಿರ ಚಂದ್ರರ ತೂಗುವ ಕಡಲ ಮೊರೆತ
ಇದ್ದಿರಬೇಕು ಬೆಳಕನ್ನೆ ಸೆಳೆವ ಮೋಹ
ದಿಗಂತ ತಬ್ಬುವ ಕನಸಿನ ಭರತ

ಏನಿತ್ತೆ ಸೀತೆ? ಹೇಳೆ ದಮಯಂತಿ?
ಸಾವಿತ್ರಿ? ಯಾವ ಬೆಂಕಿಯ ಹೊಕ್ಕು
ಏನ ಕಂಡಿರೆ ನೀವು?
ಸಾವ ಗೆಲ್ಲುವ ಬಯಕೆ ದಕ್ಕಿತೇನು?
ಯಾವ ದೇವ ಬಂದು ಹೇಳಿದ ನಿಮ್ಮ ಮಾನಕೆ ಸಾಕ್ಷಿ
ಯಾವ ಸಾಧನೆ? ಕಂಡಿರಿ ಯಾವ ತೀರ?

ಗೆದ್ದಿರಮ್ಮ, ಸತ್ತರೂ ಬಿಡದ ನೆರಳುಗಳೆ
ಅಂದಿನಂದಿನ ರೂಪ ನಾಮ ಧರಿಸಿ
ಯುಗ ಯುಗಗಳಲ್ಲು ಉಸಿರಾಡುತ್ತೀರಿ
ನಿಡುಸುಯ್ಯುವ ಕಣ್ಣುಗಳ ಹನಿಗಳಾಗಿ
ಹುಟ್ಟಿಸಿದ ಅಪ್ಪಗಳ ಕನಸಿನಾದರ್ಶಗಳೆ
ನಿಮ್ಮ ಶಾಶ್ವತ ಬೆಲೆಗೆ ನಮ್ಮ ಪ್ರಾಣ ದಂಡ?

■ ಡಾ|| ಬಿ.ಎನ್. ಸುಮಿತ್ರಾಬಾಯಿ

ಸಂಪಾದಕೀಯ

ಪುರುಷ ರಾಜಕಾರಣವೇ 'ಮಾದರಿ' ಆಗದಿರಲಿ

ಹದಿನೈದನೆಯ ಲೋಕಸಭೆಯ ಚುನಾವಣೆಯ ಇಡಿಯ ಪ್ರಕ್ರಿಯೆ ಪುರುಷ ಪ್ರಧಾನ ರಾಜಕಾರಣವನ್ನೇ ಎತ್ತಿ ಹಿಡಿದಿದೆ. ಈ ರೀತಿಯ ರಾಜಕಾರಣ ಕಣ್ಣಿಗೆ ರಾಚುವಂತೆ ಕಾಣಿಸುತ್ತಿರುವ ಹಿನ್ನೆಲೆಯಲ್ಲಿ ರಾಜಕೀಯದಲ್ಲಿ ಇಂದು ಮಹಿಳೆಯರ ಭವಿಷ್ಯದ ಬಗ್ಗೆ ಆತಂಕವಾಗುತ್ತದೆ. ಪಕ್ಷಾಂತರ, ಲಂಚ, ಹಿಂಸೆ, ಹಣದ ಚೆಲ್ಲಾಟ, ಕೊಲೆಯ ಸಂಸ್ಕೃತಿಗಳು ರಾಜಕಾರಣದ ಭಾಗವಾಗಿರುವ ಇಂದಿನ ರಾಜಕೀಯದಲ್ಲಿ ಮಹಿಳೆಯರ ಪರವಾದ ಧ್ವನಿಗಳು ಹೇಳ ಹೆಸರಿಲ್ಲದವುಗಳಾಗುತ್ತಿವೆ. ಮೌಲ್ಯಾಧರಿತ ರಾಜಕಾರಣ ಕಣ್ಮರೆಯಾಗಿ ಹಣ, ಜಾತಿ, ತೋಳ್ಬಲವೇ ಪ್ರಧಾನವಾಗಿರುವ ಇಂದಿನ ರಾಜಕೀಯ ಮಹಿಳಾ ಮೀಸಲಾತಿಯ ಪ್ರಶ್ನೆಯನ್ನು ಮೂಲೆಗೊತ್ತಿದೆ. 33.1 ಮಹಿಳಾ ಮೀಸಲಾತಿ ಬಗ್ಗೆ ಧ್ವನಿ ಎತ್ತಿದ ಪಕ್ಷಗಳೂ ಕೂಡ ಇಂದು ಪಕ್ಷದೊಳಗಾಗಲೀ ಅಥವಾ ಲೋಕಸಭೆಯಲ್ಲಾಗಲೀ ಮಹಿಳೆಯರ ಪ್ರಾತಿನಿಧ್ಯ ಇರಲೇಬೇಕೆಂಬ ಒತ್ತಾಯವನ್ನು ಹೇರುತ್ತಿಲ್ಲ. ಹೇಗೋ ತಮಗೆ, ತಮ್ಮವರಿಗೆ ಟಿಕೆಟ್ ಸಿಕ್ಕರೆ ಸಾಕು ಎನ್ನುವ ಸ್ವಾರ್ಥದ ಧೋರಣೆಗಳಿಂದಾಗಿ ಪಕ್ಷಾಂತರಗಳು ಹೆಚ್ಚಾಗಿವೆ.

ಕರ್ನಾಟಕದಲ್ಲಿ ಒಟ್ಟು 28 ಕ್ಷೇತ್ರಗಳಲ್ಲಿ ಲೋಕಸಭೆಗೆ ಚುನಾವಣೆ ನಡೆದಿದೆ. ಪ್ರಮುಖ ಪಕ್ಷಗಳಿಂದ ನಾಲ್ಕು ಜನ ಮಹಿಳಾ ಅಭ್ಯರ್ಥಿಗಳು ಮಾತ್ರ ಸ್ಪರ್ಧಿಸಿದ್ದಾರೆ. ರಾಜಕಾರಣಿಗಳ ಸಂಬಂಧಿಗಳಿಗೆ ಟಿಕೆಟ್ ನೀಡುವುದನ್ನು ಸಂಸ್ಕೃತಿಯಾಗಿ ಮುಂದುವರಿಸಿಕೊಂಡು ಹೋಗುತ್ತಿರುವುದರ ಹಿನ್ನೆಲೆಯಲ್ಲಿ ಬಳ್ಳಾರಿಯಲ್ಲಿ ಜಲದರ್ಗಿ ಶಾಂತಾ ಅಭ್ಯರ್ಥಿಯಾಗಿ ಆಯ್ಕೆಯಾಗಿದ್ದಾರೆ. ಕನಕಪುರದಿಂದ ಸ್ಪರ್ಧಿಸಿರುವ ತೇಜಸ್ವಿನಿ ಗೌಡ ಆಗಲೀ ಅಥವಾ ಉತ್ತರ ಕನ್ನಡದಿಂದ ಸ್ಪರ್ಧಿಸಿರುವ ಮಾರ್ಗರೇಟ್ ಆಳ್ವರಾಗಲೀ ಮಹಿಳಾ ಪ್ರಾತಿನಿಧ್ಯಕ್ಕಾಗಿ ಪಕ್ಷದೊಳಗಾಗಲೀ ಅಥವಾ ಹೊರಗಿನ ರಾಜಕಾರಣದಲ್ಲಾಗಲೀ ಧ್ವನಿ ಎತ್ತಿ ಮಾತನಾಡಿದ ಪ್ರಕರಣವಿಲ್ಲ. ಉಸಿರುಗಟ್ಟಿಸುವ ರಾಜಕೀಯದ ವಾತಾವರಣದಲ್ಲಿ ಸ್ಪರ್ಧಿಸಿರುವ ಮಹಿಳೆಯರೂ ಪುರುಷ ರಾಜಕಾರಣವನ್ನೇ 'ಮಾದರಿ'ಯಾಗಿ ಇಟ್ಟುಕೊಳ್ಳುವ ಅನಿವಾರ್ಯ ಸ್ಥಿತಿಯನ್ನು ಎದುರಿಸುತ್ತಿದ್ದಾರೆ.

ಕರ್ನಾಟಕದಲ್ಲಿ ಮಾತ್ರ ಈ ಪರಿಸ್ಥಿತಿ ಇದೆ ಎಂದೇನೂ ಅಲ್ಲ. 57 ವರ್ಷಗಳಲ್ಲಿ ಕೇರಳದಲ್ಲಿ 7 ಜನ ಮಹಿಳೆಯರು ಮಾತ್ರ ಲೋಕಸಭೆಯ ಮುಖ ಕಂಡವರು. ಅಕ್ಷರಸ್ಥ ರಾಜ್ಯವೆಂದೇ ಹೆಸರಾಗಿರುವ, ಮಹಿಳೆಯರ ಸಬಲತೆಯಲ್ಲಿ ಸಾಧನೆ ಕಂಡಿದೆಯೆಂಬ ಹೆಗ್ಗಳಿಕೆಗೆ ಒಳಗಾಗಿರುವ ಕೇರಳದಲ್ಲಿಯೂ ಮಹಿಳಾ ರಾಜಕಾರಣಿಗಳ ಸಂಖ್ಯೆ ಕಡಿಮೆ ಇರುವುದು ನಮ್ಮ ದೇಶದ ರಾಜಕೀಯದಲ್ಲಿ ಮಹಿಳಾ ರಾಜಕಾರಣಿಗಳ ಭವಿಷ್ಯವನ್ನು ಸೂಚಿಸುತ್ತಿದೆ. ಈ ಬಾರಿ ಕೇರಳದಲ್ಲಿ ಮೇರಿ ಫ್ರಾನ್ಸಿಸ್ ಎಂಬಾಕೆ ಎರ್ನಾಕುಲಂನಿಂದ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದಾರೆ. ರಸ್ತೆ ಅಗಲೀಕರಣದ ಹಂತದಲ್ಲಿ ಮನೆ, ಮಠ, ಆಸ್ತಿ ಕಳೆದುಕೊಂಡು ಸ್ಥಳಾಂತರಗೊಂಡಿರುವವರಲ್ಲಿ ಈಕೆ ಕೂಡ ಒಬ್ಬರು. ಮೇಧಾ ಪಾಟ್ಕರ್ ಇವರ ಚಳವಳಿಗೆ ಬೆಂಬಲಿಸಿದ್ದಾರೆ. ಸ್ಥಳಾಂತರಗೊಳಿಸುವ ಮುಂಚೆ ಪುನರ್ವಸತಿಗೊಳಿಸುವ ಕಾಯಿದೆಯನ್ನು ಲೋಕಸಭೆಯಲ್ಲಿ ಮಂಡಿಸುವುದೇ ತಮ್ಮ ಉದ್ದೇಶ ಎಂದು ಈಕೆ ಚುನಾವಣೆಯ ಪ್ರಣಾಳಿಕೆಯಲ್ಲಿ ಹೇಳಿಕೊಂಡಿದ್ದಾರೆ. ಹೀಗೆ ಸಮಸ್ಯೆಗಳಿಂದ ಬಿಡಿಸಿಕೊಂಡು ಪ್ರಭುತ್ವ, ಪ್ರಭುತ್ವದ ನೆಲೆಗಳು, ಕಾನೂನುಗಳನ್ನು ಪ್ರಶ್ನಿಸುವಂತಹ, ಚಳವಳಿಯ ಬೆಂಬಲ ಇರುವ ಇಂತಹ ಮಹಿಳೆಯರು ಇಂದಿನ ರಾಜಕಾರಣದಲ್ಲಿ ಹೊಸ ಹೆಜ್ಜೆ ಮೂಡಿಸಬಲ್ಲರೇ ಎಂದು ಕಾದು ನೋಡಬೇಕಾಗಿದೆ.

'ವೈಯಕ್ತಿಕ' ಅಂಶಗಳನ್ನು ಕೆಣಕಿ ಮಹಿಳೆಯರ ಕಾಲೆಳೆಯುವ ಪ್ರಯತ್ನ ಮಾಡುವ ಪುರುಷ ರಾಜಕಾರಣ ಲಿಂಗ ತಾರತಮ್ಯದ ಧೋರಣೆಗಳನ್ನು ಬಲವಾಗಿ ಹೆಣೆದುಕೊಂಡಿರುತ್ತದೆ. ಲಕ್ನೋದಿಂದ ಸ್ಪರ್ಧಿಸಿರುವ ನಫೀಸ್ ಆಲಿಯವರನ್ನು 'ಬಿಳಿಯ ಕೂದಲಿನ ಹೆಂಗಸು' ಎಂದೂ ಸೋನಿಯಾ ಗಾಂಧಿಯವರನ್ನು 'ಮುದುಕಿ' ಎಂದೂ ಲೇವಡಿ ಮಾಡುವ ರಾಜಕಾರಣದ ಹಿಂದೆ ಎಂತಹ ಪುರುಷ ಪ್ರಧಾನ ಮನಸ್ಸುಗಳು ಕೆಲಸ ಮಾಡುತ್ತವೆ ಎಂಬುದನ್ನು ನಾವು ಗುರುತಿಸಬಹುದಾಗಿದೆ.

'ರೋಡ್' ಶೋಗಳಲ್ಲಿ ಕೂಡಾ ಮಹಿಳೆಯರನ್ನು ವಿಶೇಷವಾಗಿ ನಟಿಯರನ್ನು ಬಳಸಿಕೊಳ್ಳುವುದು, ರಾಜಕಾರಣಿಗಳಿಗೆ ಕುಂಕುಮ ಹಚ್ಚಿ, ಆರತಿ ಬೆಳಗಿ, ಹೂ ಎರಚುವಂತಹ ಕ್ರಿಯೆಗಳಿಗೆ ಧಾರಾಳವಾಗಿ ಮಹಿಳೆಯರನ್ನು ಬಳಸಿಕೊಳ್ಳುವಂತಹ ಸಂಸ್ಕೃತಿಯ ಮೂಲಕ ಓಟನ್ನು ಸೆಳೆಯಲು ಪ್ರಯತ್ನಿಸಲಾಗುತ್ತಿದೆ. ಇಂತಹ ತಂತ್ರಗಾರಿಕೆಯ ಬಗ್ಗೆ ನಮ್ಮ ಮಹಿಳೆಯರೂ ತಲೆ ಕೆಡಿಸಿಕೊಳ್ಳದಿರುವುದು ದುರಂತವೇ ಸರಿ.

ಇದೇ ಸಂದರ್ಭದಲ್ಲಿ ಹಳೆಯ ರಾಜಕಾರಣ, ರಾಜಕಾರಣಿಗಳ ಬಗ್ಗೆ ಭ್ರಮನಿರಸನ ಹೊಂದಿರುವ ಕೆಲವು ಯುವತಿಯರು ಪರ್ಯಾಯ ರಾಜಕಾರಣದ ಆಶಯದಿಂದ ದೆಹಲಿ, ಮುಂಬಯಿಯಂತಹ ಪಟ್ಟಣಗಳಲ್ಲಿ ಸ್ವತಂತ್ರ ಅಭ್ಯರ್ಥಿಗಳಾಗಿ ಸ್ಪರ್ಧಿಸಿರುವುದು ಸ್ವಾಗತಾರ್ಹವಾಗಿದೆ. ಆರ್ಥಿಕ ಹಿಂಜರಿತ, ಸರ್ಕಾರದ ವೈಫಲ್ಯ, ರಾಜಕಾರಣಿಗಳ ಸ್ವಾರ್ಥ, ಜಾತೀಯತೆಯಂತಹ ಸಮಸ್ಯೆಗಳ ಹಿನ್ನೆಲೆಯಲ್ಲಿ 'ಬದಲಾವಣೆಗಾಗಿ ಯುವಶಕ್ತಿ' ಎಂದು ಹೇಳಿಕೊಳ್ಳುವ ಇವರು ಹಣ/ತೋಳ್ಬಲಗಳ ಸ್ಪರ್ಧೆಯಲ್ಲಿ ಎಲ್ಲಿ ಕಳೆದುಹೋಗುತ್ತಾರೆಂಬುದು ಗೊತ್ತಿಲ್ಲ. ಒಂದು ಪಕ್ಷ ಹೊಸ ಆಶಯಗಳಿಂದ ಸ್ವತಂತ್ರ ಅಭ್ಯರ್ಥಿಗಳಾಗಿ ಸ್ಪರ್ಧಿಸಿರುವ ಮೂರು-ನಾಲ್ಕು ಮಹಿಳೆಯರಾದರೂ ಆರಿಸಿ ಬಂದಲ್ಲಿ, ಮುಂಬರುವ ದಿನಗಳಲ್ಲಿ ಮಹಿಳಾ ರಾಜಕಾರಣದ ಒಂದು ನೋಟ ನಮಗೆ ಲಭ್ಯವಾಗಬಹುದೆಂದು ನಾವು ಆಶಿಸಬಹುದಾಗಿದೆ. ❑

ಒಳಗಿನ ಪುಟಗಳಲ್ಲಿ....

ರಾಜಕೀಯದಲ್ಲಿ ಮಹಿಳೆ



■ ಸುಪ್ರಿಯಾ

ಕಾಂಗ್ರೆಸ್, ಬಿಎಸ್‌ಪಿ, ಎಐಎಡಿಎಂಕೆ, ತೃಣಮೂಲ ಕಾಂಗ್ರೆಸ್ ನೇತೃತ್ವವನ್ನು ಮಹಿಳೆಯರೇ ವಹಿಸಿದ್ದರೂ 14ನೇ ಲೋಕಸಭೆಯಲ್ಲಿ ಮಹಿಳೆಯರ ಪ್ರಾತಿನಿಧ್ಯ ಅತ್ಯಂತ ಕಡಿಮೆ ಇತ್ತು. ಈಗ 15ನೇ ಲೋಕಸಭೆ ಚುನಾವಣೆ ಸಂದರ್ಭದಲ್ಲೂ ಪರಿಸ್ಥಿತಿ ಸುಧಾರಿಸಲಿಲ್ಲ. ರಾಜಕೀಯ ಪ್ರವೇಶಕ್ಕೆ ಮಹಿಳೆಗಿರುವ ಸಮಸ್ಯೆಗಳೇನು?

ಜಿಲ್ಲಾ ಪರಿಷತ್ ಹಾಗೂ ಪಂಚಾಯಿತಿ ಮಟ್ಟಗಳಲ್ಲಿ ಮೂರನೇ ಒಂದರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡುವ ವಿಚಾರ ಯಾವುದೇ ರಾಜಕೀಯ ಪಕ್ಷಗಳ ಪ್ರತಿರೋಧವಿಲ್ಲದೆ ಭಾರತದ ಎಲ್ಲಾ ರಾಜ್ಯಗಳಲ್ಲಿ ಜಾರಿಯಾಗಿ ಹೋಯಿತು.

ಈ ದಿಸೆಯಲ್ಲಿ ಕೇಂದ್ರ ಸರ್ಕಾರದ ಶಾಸನ ಜಾರಿಯಾಗುವ ಮುಂಚೆಯೇ ಕರ್ನಾಟಕದಲ್ಲಿ 1983ರಲ್ಲೇ ರಾಮಕೃಷ್ಣ ಹೆಗಡೆ ಅವರ ಸರ್ಕಾರ ಈ ಪ್ರಕ್ರಿಯೆಯನ್ನು ಆರಂಭಿಸಿತ್ತು. ಇದು ಗ್ರಾಮ ಪಂಚಾಯಿತಿ ಮಟ್ಟಗಳಲ್ಲಿ ಮಹಿಳೆಯರಿಗೆ ಶೇ. 25ರಷ್ಟು ಮೀಸಲು ಒದಗಿಸಿತ್ತು.

1980ರ ದಶಕದ ಮಧ್ಯಭಾಗದಲ್ಲಿ ಶರದ್‌ಜೋಷಿ ನೇತೃತ್ವದ ಮಹಾರಾಷ್ಟ್ರದ ಶೇತ್ಕರಿ ಸಂಘಟನೆ ಮಹಾರಾಷ್ಟ್ರ ರಾಜ್ಯದ ಪಂಚಾಯಿತಿ ಚುನಾವಣೆಗಳಿಗೆ ಸರ್ವ ಮಹಿಳಾ ಸಮಿತಿಗಳನ್ನು ಕಣಕ್ಕಿಳಿಸಲು ನಿರ್ಧರಿಸಿತು. ಸಾಧ್ಯವಾದಷ್ಟು ಕ್ಷೇತ್ರಗಳಲ್ಲಿನ ಜಿಲ್ಲಾಪರಿಷತ್‌ಗಳಿಗೆ ಮಹಿಳೆಯರು ಆಯ್ಕೆಯಾಗುವುದರತ್ತ ಗಮನ ಕೇಂದ್ರೀಕರಿಸಿದವು. ಇದಕ್ಕೆ ಸಂಘಟನೆಯ ಪುರುಷರ ಬೆಂಬಲದ ಪಾತ್ರವಿತ್ತು.

ಹೀಗಿದ್ದೂ 1996ರ ಸೆಪ್ಟೆಂಬರ್‌ನಲ್ಲಿ ಸಂಸತ್ತಿನಲ್ಲಿ ಮಂಡಿಸಲಾದ ಸಂಸತ್ ಹಾಗೂ ರಾಜ್ಯ ಶಾಸನಸಭೆಗಳಲ್ಲಿ ಮೂರನೇ ಒಂದರಷ್ಟು ಸ್ಥಾನ ಮಹಿಳೆಯರಿಗೆ ಮೀಸಲಿಡುವ ಮಸೂದೆಗೆ ಭಾರಿ ಪ್ರತಿರೋಧ ಹಾಗೂ ವಿರೋಧ ವ್ಯಕ್ತವಾಯಿತು.

ವಿಪರ್ಯಾಸವೆಂದರೆ ನಮ್ಮೆಲ್ಲಾ ಪ್ರಮುಖ ರಾಜಕೀಯ ಪಕ್ಷಗಳೂ – ಕಾಂಗ್ರೆಸ್, ಬಿಜೆಪಿ, ಜನತಾದಳ ಹಾಗೂ ಎರಡು ಕಮ್ಯುನಿಸ್ಟ್ ಪಕ್ಷಗಳೂ ತಮ್ಮ ರಾಜಕೀಯ ಪ್ರಣಾಳಿಕೆಗಳಲ್ಲಿ ಶೆ. 33ರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡಲು ಬದ್ಧ ಎಂದು ಹೇಳಿಕೊಳ್ಳುತ್ತಲೇ ಬಂದಿವೆ.

ಶಾಸನಸಭೆಗಳಲ್ಲಿ ಮಹಿಳಾ ಪ್ರಾತಿನಿಧ್ಯಕ್ಕೆ ಎಷ್ಟೆಲ್ಲಾ ಹೋರಾಡಿದರೂ ಫಲ ಕಾಣದ ಸ್ಥಿತಿಯಲ್ಲಿ ಇಂದು ನಾವಿದ್ದೇವೆ. 15ನೇ ಲೋಕಸಭಾ ಚುನಾವಣೆಯಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯ ಪ್ರಮಾಣವನ್ನು ನೋಡಿದರೆ ರಾಜಕೀಯ ರಂಗವಿನ್ನೂ ಪುರುಷರ ಕೋಟೆಯಾಗಿಯೇ ಮುಂದುವರಿಯುವಂತೆ ಕಾಣುತ್ತಿದೆ. ಈ ಪರಿಸ್ಥಿತಿಯನ್ನು 1920ರ ದಶಕದಲ್ಲಿದ್ದ ಪರಿಸ್ಥಿತಿಗೆ ಹೋಲಿಸಿ ನೋಡಿ:

ಪ್ರತಿನಿಧಿ ಸರ್ಕಾರಕ್ಕಾಗಿ ಭಾರತೀಯರ ಚಳವಳಿಗೆ ಸ್ಪಂದಿಸಿದ ಬ್ರಿಟಿಷ್ ಸರ್ಕಾರ, ಸರ್ಕಾರದಲ್ಲಿ ಕೆಲವು ಭಾರತೀಯರನ್ನು ಒಳಗೊಳ್ಳುವ ಉದ್ದೇಶದಿಂದ ಸಾಂವಿಧಾನಿಕ ಸುಧಾರಣೆಗಳಿಗಾಗಿ ಪ್ರಸ್ತಾವವೊಂದನ್ನು ಸಿದ್ಧಪಡಿಸಲು 1919ರಲ್ಲಿ ಮಾಂಟೇಗ್ ಹಾಗೂ ಚೆಮ್ಸ್‌ಫೋರ್ಡ್ ನೇತೃತ್ವದ ಸಮಿತಿಯೊಂದನ್ನು ರಚಿಸಿತು. ಈ ಸಮಿತಿಯ ಮುಂದೆ ಅನೇಕ ಗುಂಪುಗಳು ತಂತಮ್ಮ ಪ್ರಾತಿನಿಧ್ಯದ ಅಗತ್ಯದ ವಿಚಾರಗಳನ್ನು ಪ್ರತಿಪಾದಿಸಿಕೊಂಡವು. ಈ ಸಮಿತಿಯ ಬಳಿಗೆ ಸರೋಜಿನಿ ನಾಯ್ಡು ಹಾಗೂ ಮಾರ್ಗರೆಟ್ ಕಸಿನ್ಸ್ ಮಹಿಳೆಯರ ಸಣ್ಣ ನಿಯೋಗವೊಂದನ್ನು ಒಯ್ದಿದ್ದರು. ಪುರುಷರಂತೆ ಮಹಿಳೆಯರಿಗೂ ಶಾಸನಸಭೆಗಳಲ್ಲಿ ಪ್ರಾತಿನಿಧ್ಯದ ಸಮಾನ ಹಕ್ಕುಗಳನ್ನು ಒದಗಿಸಬೇಕೆಂದು ಅವರು ಒತ್ತಾಯಿಸಿದ್ದರು.

ಬ್ರಿಟಿಷ್ ಸರ್ಕಾರ ಸಹಜವಾಗಿಯೇ ಈ ಬೇಡಿಕೆ ಮೂರ್ಖತನದ್ದು ಎಂದು ಭಾವಿಸಿತು. ಏಕೆಂದರೆ ಬಹುತೇಕ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಹೋರಾಟಗಳೇ ನಡೆದಿದ್ದರೂ ಆಗಿನ್ನೂ ಮಹಿಳೆಯರಿಗೆ ಮತದಾನದ ಹಕ್ಕನ್ನೇ ನೀಡಿರಲಿಲ್ಲ.

'ಪರ್ದಾ ಪದ್ಧತಿ ಹಾಗೂ ಮಹಿಳಾ ಶಿಕ್ಷಣದ ವಿರುದ್ಧ ನಿಷೇಧ ಜಾರಿಗೊಳಿಸುವುದನ್ನು ಮುಂದುವರಿಸಿರುವ ಸಮಾಜದಲ್ಲಿ ಮಹಿಳೆಯರಿಗೆ ವೋಟು ನೀಡುವ ಹಕ್ಕಿನ ವಿಸ್ತರಣೆ ಅಪಕ್ವವಾಗುತ್ತದೆ' ಎಂದು ಸೌತ್‌ಬರೊ ಸಮಿತಿ ತಿಳಿಸಿತ್ತು. (ಸ್ಟೇಟಸ್ ಆಫ್ ವಿಮೆನ್ ಸಮಿತಿ ಕುರಿತ ವರದಿ ಪುಟ 284–285).

ಆದರೆ ಈ ಬೇಡಿಕೆಯನ್ನು ಯಥಾವತ್ತಾಗಿ ತಿರಸ್ಕರಿಸುವ ಹೊಣೆಯನ್ನು ತಮ್ಮ ಹೆಗಲಿಗೇರಿಸಿಕೊಳ್ಳುವ ಬದಲಿಗೆ ಮಹಿಳೆಯರಿಗೆ ಮತದಾನದ ಹಕ್ಕು ನೀಡಲು ಅಥವಾ ತಿರಸ್ಕರಿಸಲು ಬ್ರಿಟಿಷ್ ಸರ್ಕಾರ ಆಗಷ್ಟೇ ಭಾರತದಲ್ಲಿ ರಚಿಸಿದ್ದ ಪ್ರಾದೇಶಿಕ ಶಾಸನಸಭೆ (ಪ್ರಾವಿನ್ಷಿಯಲ್ ಲೆಜಿಸ್ಲೇಚರ್)ಗಳ ವಿವೇಚನೆಗೇ ವಹಿಸಿತು. ಬ್ರಿಟಿಷರ ಪರಿಕಲ್ಪನೆ ಏನಾಗಿತ್ತೆಂದರೆ, ಭಾರತೀಯರು ಅಷ್ಟೊಂದು 'ಹಿಂದುಳಿದವರು' ಆಗಿರುವುದರಿಂದ ಅವರು ಮಹಿಳೆಯರಿಗೆ ಸಮಾನ ರಾಜಕೀಯ ಹಕ್ಕುಗಳನ್ನು ಒಪ್ಪಿಕೊಳ್ಳುವುದು ಎಂದೂ ಸಾಧ್ಯವೇ ಇಲ್ಲ ಎಂಬಂತಹದಾಗಿತ್ತು. ಆದರೆ ಆ ಸಂದರ್ಭದಲ್ಲಿ ಭಾರತದಲ್ಲಿ ಯಾವುದೇ

ಸಾಮೂಹಿಕವಾದ ಮಹಿಳಾ ಮತದಾನ ಚಳವಳಿ ನಡೆಯದೇ ಇದ್ದರೂ ಭಾರತದ ಪ್ರತಿಯೊಂದು ಪ್ರಾದೇಶಿಕ ಶಾಸನಸಭೆಗಳು ಯಾವುದೇ ಗೊಂದಲ ಇಲ್ಲದೆ ಪುರುಷರೊಂದಿಗೆ ಮಹಿಳೆಯರ ಪ್ರಾತಿನಿಧ್ಯಕ್ಕೂ ಅಲ್ಪಾವಧಿಯಲ್ಲೇ ಅವಕಾಶ ನೀಡಿದವು.

ಭಾರತ ಹಾಗೂ ಬ್ರಿಟನ್‌ನ ಮಹಿಳಾ ಸಂಘಟನೆಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಐರಿಷ್ ಸ್ತ್ರೀವಾದಿ ಮಾರ್ಗರೆಟ್ ಕಸಿನ್ಸ್‌ನ ಸಾಕ್ಷ್ಯ ಅಥವಾ ನಿವೇದನೆ ಮಹಿಳೆಯರ ರಾಜಕೀಯ ಹಕ್ಕುಗಳ ಬಗ್ಗೆ ಪಾಶ್ಚಾತ್ಯ ಹಾಗೂ ಭಾರತೀಯ ಪ್ರತಿಕ್ರಿಯೆಗಳ ಮಧ್ಯದ ವೈರುಧ್ಯವನ್ನು ಸ್ಪಷ್ಟವಾಗಿ ಬಿಡಿಸಿ ಹೇಳಿದೆ. ಅದರ ಪಠ್ಯ ಹೀಗಿದೆ:

'ಐವತ್ತು ವರ್ಷಗಳ ಶಾಂತಿಯುತ ಸಾಂವಿಧಾನಿಕ ಕ್ರಮಗಳನ್ನೆಲ್ಲಾ ಪ್ರಯತ್ನಿಸಿಯಾದ ನಂತರ ಎಂಟು ವರ್ಷಗಳ ಕಾಲ ನಮ್ಮ ತೀವ್ರತರ ಪ್ರಚಾರಾಂದೋಲನ ಕಾಲದಲ್ಲಿ ಬಹುಶಃ ಪುರುಷ ರಾಜಕಾರಣಿಗಳ ಕ್ರೌರ್ಯ, ಅನ್ಯಾಯಗಳು, ಪುರುಷ ನಿಯಂತ್ರಿತ ಮಾಧ್ಯಮ, ಇಂಗ್ಲೆಂಡ್ ಹಾಗೂ ಐರ್‌ಲೆಂಡ್‌ಗಳಲ್ಲಿ ರಸ್ತೆಯಲ್ಲಿ ಹೋಗುವ ವ್ಯಕ್ತಿಗಳಿಂದ ನರಳಿದ ನನ್ನಂಥ ಮಹಿಳೆಯರಿಗೆ, ಈ ಭಾರತೀಯ ಶಾಸಕರ ಸ್ವಯಂ ಸರ್ಕಾರದಲ್ಲಿ ಈ ಮೂಲ ಪರೀಕ್ಷೆಯನ್ನು ಅಂಗೀಕರಿಸಿದ ವಿವೇಚನೆ ಹಾಗೂ ಉದಾರತೆಯನ್ನು ಪೂರ್ಣ ಮೆಚ್ಚಿಕೊಳ್ಳುವಂತಹದ್ದಾಗಿದೆ. ....1921ರ ಮದ್ರಾಸ್ ಶಾಸನಸಭಾ ಮಂಡಳಿ ಹಾಗೂ 1929ರ ಬಿಹಾರ ಮಂಡಳಿಯವರೆಗೆ ಭಾರತದ ಎಲ್ಲಾ ಶಾಸನಸಭಾ ಮಂಡಳಿಗಳೂ ಸ್ವಲ್ಪ ಮಟ್ಟಿಗಿನ ಸಾಕ್ಷರತೆ, ಆಸ್ತಿ, ವಯಸ್ಸು, ತೆರಿಗೆ ಪಾವತಿ, ವಾಸಸ್ಥಳದ ಅಳತೆ......ಯಂತಹ ಸಮಾನ ಅರ್ಹತೆಗಳನ್ನು ಹೊಂದಿದ ಪುರುಷರು ಹಾಗೂ ಮಹಿಳೆಯರಿಗೆ ಸಮಾನ ನಾಗರಿಕ ಸಂಕೇತ ಹಾಗೂ ಸಾಧನಗಳನ್ನು ನೀಡಲಾಗಿತ್ತು.' (ಮಾರ್ಗರೆಟ್ ಕಸಿನ್ಸ್, ಇಂಡಿಯನ್ ವುಮನ್‌ಹುಡ್ ಟುಡೆ, ಕಿತಾಬಿಸ್ತಾನ್ ಸೀರೀಸ್, ಅಲಹಾಬಾದ್ 1937 ಪುಟ 32–33).

ಸ್ವಲ್ಪ ಮಟ್ಟಿಗಿನ ಆಸ್ತಿ ಹಾಗೂ ಶಿಕ್ಷಣ ಹೊಂದಿದವರಿಗಷ್ಟೇ ಒಂದು ಮಿತಿಯಲ್ಲಿ ಮತದಾನದ ಹಕ್ಕನ್ನು ನೀಡಲು ಬ್ರಿಟಿಷರು ಸಿದ್ಧವಾಗಿದ್ದರಿಂದ ಈ ಮಿತಿಗಳು ಸೇರಿಕೊಂಡಿದ್ದವು. ಅವರು ಸಾರ್ವತ್ರಿಕ ವಯಸ್ಕ ಮತದಾನ ಪರಿಗಣಿಸಲು ಸಿದ್ಧರಿರಲಿಲ್ಲ. ಲಿಂಗ ತಾರತಮ್ಯ ಇಲ್ಲದೆ ವಯಸ್ಕ ಮತದಾನವನ್ನು ತಕ್ಷಣ ಒಪ್ಪಿಕೊಳ್ಳಬೇಕೆಂದು 1930ರಲ್ಲಿ ಪ್ರಾತಿನಿಧಿಕ ಮಹಿಳಾ ಸಂಘಟನೆಯೊಂದು ಮನವಿಯನ್ನು ಸಿದ್ಧ ಪಡಿಸಿದಾಗ ಬ್ರಿಟಿಷ್ ಸರ್ಕಾರ ಅದನ್ನು ತಿರಸ್ಕರಿಸಿತ್ತು. ಇದೇ ಬೇಡಿಕೆ ಭಾರತೀಯ ನಾಯಕರಿಂದ ವಿಭಿನ್ನವಾದ ಪ್ರತಿಕ್ರಿಯೆಯನ್ನು ಪಡೆದುಕೊಂಡಿತ್ತು. ಅದರ ಮುಂದಿನ ವರ್ಷವೇ 1931ರಲ್ಲಿ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್‌ನ ಕರಾಚಿ ಅಧಿವೇಶನ ಮಹಿಳೆಯರ ಸ್ಥಾನಮಾನ, ಅರ್ಹತೆ ಏನೇ ಇದ್ದರೂ ಮಹಿಳೆಯರಿಗೆ ರಾಜಕೀಯ ಸಮಾನತೆ ನೀಡುವ ಐತಿಹಾಸಿಕ ನಿರ್ಣಯವನ್ನು ಕೈಗೊಂಡಿತು. ಈ ಪ್ರಸ್ತಾವಕ್ಕೆ ಯಾವುದೇ ವಿರೋಧವೂ ಬರಲಿಲ್ಲ.



ಮಹಿಳೆಯ ಹಕ್ಕುಗಳನ್ನು ರಕ್ಷಿಸುವ ಪ್ರತಿಪಾದನೆಯ ಕಾನೂನುಗಳು ವಿಶ್ವದ ಬೇರೆ ರಾಷ್ಟ್ರಗಳಲ್ಲಿ ಉಂಟು ಮಾಡುವ ಪ್ರತಿರೋಧ ಅಥವಾ ದ್ವೇಷಕ್ಕೆ ಹೋಲಿಸಿದರೆ ಭಾರತದಲ್ಲಿ ಇದು ಕಡಿಮೆ.

ಯೂರೋಪಿನ ಮಹಿಳೆಯರಿಗೆ ಮತದಾನದ ಹಕ್ಕು ಪಡೆದು ಕೊಳ್ಳಲು ಇಡೀ ಶತಮಾನದ ಹೋರಾಟ ಬೇಕಾಯಿತು. ಆದರೆ ಭಾರತದ ಮಹಿಳೆಯರಿಗೆ ಮತದಾನದ ಹಕ್ಕು ಏನೂ ಕಿರಿಕಿರಿ ಇಲ್ಲದೆ ಅಥವಾ ಹೋರಾಟ ಇಲ್ಲದೆಯೇ ದಕ್ಕಿದೆ. ಗರ್ಭಪಾತದ ಹಕ್ಕು, ಸಮಾನ ಉದ್ಯೋಗ ಹಾಗೂ ಶೈಕ್ಷಣಿಕ ಅವಕಾಶಗಳ ಹಕ್ಕು, ಸಮಾನ ಕೆಲಸಕ್ಕೆ ಸಮಾನ ವೇತನ, ಕೌಟುಂಬಿಕ ಹಿಂಸೆ ವಿರುದ್ಧದ ರಕ್ಷಣೆ – ಈ ಎಲ್ಲವೂ ಭಾರತದಲ್ಲಿ ಹೆಚ್ಚು ಪ್ರತಿರೋಧ ಅಥವಾ ದ್ವೇಷ ಇಲ್ಲದೆ ಕಾನೂನುಗಳಾಗಿ ಜಾರಿಯಾಗಿವೆ. ಆದರೆ ಈ ಕಾನೂನುಗಳ ಅನುಷ್ಠಾನದಲ್ಲಿ ಸಮರ್ಪಕ ಆಡಳಿತ ಯಂತ್ರದ ಕೊರತೆ ಅಥವಾ ರಾಜಕೀಯ ಇಚ್ಛಾಶಕ್ತಿಯ ಕೊರತೆಯಿಂದಾಗಿ ಈ ಎಲ್ಲಾ ಪ್ರಗತಿಪರ ಕಾನೂನುಗಳು ನಾಗರಿಕರ ಬದುಕಿನ ಮೇಲೆ ಪ್ರಭಾವ ಬೀರುವಲ್ಲಿ ವಿಫಲವಾಗಿವೆ.

ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಎಲ್ಲಾ ಹಂತಗಳಲ್ಲೂ ಕಾಂಗ್ರೆಸ್ ಪಕ್ಷದಲ್ಲಿ ಹಲವು ಮಹಿಳಾ ಕಾರ್ಯಕರ್ತೆಯರು ಹಾಗೂ ನಾಯಕಿಯರು ಸಕ್ರಿಯರಾಗಿದ್ದರು. ಆದರೆ ಸ್ವಾತಂತ್ರ್ಯಾನಂತರ 1952ರಲ್ಲಿ ಮೊದಲ ಲೋಕಸಭೆಗೆ ಚುನಾವಣೆ ನಡೆದಾಗಲಿಂದಲೂ ಮಹಿಳಾ ಪ್ರಾತಿನಿಧ್ಯ ಪ್ರಮಾಣ ಶೇ.10ಕ್ಕಿಂತ ಕಡಿಮೆ ಪ್ರಮಾಣಕ್ಕೇ ಸ್ಥಗಿತಗೊಂಡಿದೆ.

ಈ ಪಟ್ಟಿ ನೋಡಿ:

ಲೋಕಸಭೆ (ಕೆಳಮನೆ)ಯಲ್ಲಿ ಮಹಿಳಾ ಪ್ರಾತಿನಿಧ್ಯ

ಲೋಕಸಭೆ ಅವಧಿ	ಒಟ್ಟು ಸ್ಥಾನ	ಮಹಿಳಾ ಸದಸ್ಯರ ಸಂಖ್ಯೆ	ಪ್ರಮಾಣ
1952–57	489	14	2.8
1957–62	494	22	4.4
1962–67	494	31	6.2
1967–71	520	29	5.6
1971–77	520	21	4.05
1977–80	542	19	3,5
1980–84	542	28	5.1
1984–89	542	42	8.16
1989–91	529	29	5.5
1991–96	521	37	6.8
1996	543	40	7.37
1998	543	43	7.92
1999	543	49	9.02
2004	543	45	8.29

1999ರಲ್ಲಿ ಆಯ್ಕೆಯಾದ 13ನೇ ಲೋಕಸಭೆಯಲ್ಲಿ 49 ಮಹಿಳಾ ಸದಸ್ಯೆಯರಿದ್ದರು. ಶೇ. 9.02ರಷ್ಟಾಗುವ ಈ ಪ್ರಮಾಣವೇ ಈವರೆಗೆ ಲೋಕಸಭೆಯಲ್ಲಿ ಕಂಡ ಗರಿಷ್ಠ ಮಹಿಳಾ ಪ್ರಾತಿನಿಧ್ಯವಾಗಿದೆ. ಕನಿಷ್ಠ ಪ್ರಾತಿನಿಧ್ಯವಿದ್ದದ್ದು ಕೇವಲ 14 ಎಂಪಿಗಳು ಅಥವಾ ಶೇ. 2.8 ರಷ್ಟು ಮಹಿಳಾ ಎಂಪಿಗಳನ್ನು ಹೊಂದಿದ್ದ ಮೊದಲ ಲೋಕಸಭೆಯಲ್ಲಿ.

ಸರೋಜಿನಿ ನಾಯ್ಡು ಕಾಲದಿಂದ......

ಭಾರತದ ರಾಜಕೀಯ ಕ್ಷೇತ್ರ ಸಶಕ್ತ ಮಹಿಳೆಯರನ್ನು ಕಂಡಿದೆ. 1925ರಲ್ಲಿ ಬ್ರಿಟಿಷರ ವಿರುದ್ಧದ ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಅನ್ನು ಮುನ್ನಡೆಸಿದ ಅದರ ಪ್ರಥಮ ಮಹಿಳಾ ಅಧ್ಯಕ್ಷೆ ಸರೋಜಿನಿ ನಾಯ್ಡು ಅವರಿಂದ 1966ರಲ್ಲಿ ರಾಷ್ಟ್ರದ ಮೊದಲ ಮಹಿಳಾ ಪ್ರಧಾನಿಯಾದ ಇಂದಿರಾಗಾಂಧಿಯ ವರೆಗೆ ಅಧಿಕಾರ ರಾಜಕಾರಣದಲ್ಲಿ ಮಹಿಳೆ ಹೆಜ್ಜೆ ಇರಿಸಿದ್ದಾಳೆ. ಜೊತೆಗೇ ಹಲವು ರಾಜ್ಯಗಳಲ್ಲಿ ಅನೇಕ ಮಹಿಳಾ ಮುಖ್ಯಮಂತ್ರಿಗಳು , ಸಚಿವರು ಆಡಳಿತ ನಡೆಸಿದರೂ ಭಾರತೀಯ ಮಹಿಳೆ ರಾಜಕೀಯದಲ್ಲಿನ್ನೂ ನಗಣ್ಯಳಾಗಿಯೇ ಇದ್ದಾಳೆ. ದಕ್ಷಿಣ ಏಷ್ಯಾ ರಾಷ್ಟ್ರಗಳ ಪರಂಪರೆಗೆ ಅನುಗುಣವಾಗಿ ಅಧಿಕಾರ ಹಿಡಿದ ಬಹುತೇಕ ಮಹಿಳೆಯರಿಗೆ ತಂದೆ, ಪತಿ ಅಥವಾ ಪುರುಷ ಸಂಬಂಧಿಗಳ ಬೆಂಬಲ ಇತ್ತು. ಅಧಿಕಾರ ಗದ್ದುಗೆ ಏರಿದ ನಂತರ ಈ ಮಹಿಳೆಯರು ವ್ಯವಸ್ಥೆಯ ಭಾಗವಾಗೇ ಹೋದರು. ರಾಜಕಾರಣದೊಳಗೆ ಮಹಿಳಾ ವಿಚಾರಗಳನ್ನು ಯಾರೂ ಪ್ರಧಾನವಾಗಿ ಗ್ರಹಿಸಲಿಲ್ಲ. ಮಹಿಳಾ ಮೀಸಲು ಮಸೂದೆಗೆ ಹಿಡಿದಿರುವ ಗ್ರಹಣಕ್ಕೂ ರಾಜಕೀಯ ಪಕ್ಷಗಳಲ್ಲಿ ಮಹಿಳಾ ವಿಚಾರಗಳ ಬಗ್ಗೆ ಸಂವೇದನಾಶೀಲತೆಯ ಕೊರತೆಯೇ ಕಾರಣ. ಕಳೆದ 16 ವರ್ಷಗಳಿಂದ ಮಹಿಳಾ ಮೀಸಲು ಮಸೂದೆಯನ್ನು ನಾಲ್ಕು ಬಾರಿ ಮಂಡಿಸುವ ಯತ್ನ ವಿಫಲವಾಗಿದೆ. ಮುಖ್ಯವಾಹಿನಿಯ ರಾಜಕೀಯ ವಾಗ್ವಾದ (ಡಿಸ್‌ಕೋರ್ಸ್)ಗಳಲ್ಲಿ ಮಹಿಳಾ ವಿಚಾರಗಳ ಒಳಗೊಳ್ಳುವಿಕೆ ಇನ್ನೂ ದೂರವೇ ಇದೆ.



ಸ್ವತಂತ್ರ ಭಾರತದಲ್ಲಿ ರಾಜಕೀಯ ಎನ್ನುವುದು ಮಹಿಳೆಗೆ ಕ್ಲಿಷ್ಟಕರ ಆಗಿದೆ. ಇದಕ್ಕೆ ಮುಖ್ಯ ಕಾರಣ ಲಿಂಗ ತಾರತಮ್ಯ. ಪಕ್ಷದಲ್ಲಿ ಪ್ರಭಾವಶಾಲಿ ಪುರುಷರ ನೆರಳಿಲ್ಲದೆ ತಮ್ಮತನ ಸಾಧಿಸುವುದು ಮಹಿಳೆಯರಿಗೆ ಕಷ್ಟ ಎನ್ನುವ ಸ್ಥಿತಿ ಇದೆ.

ಆದರೂ ನಮ್ಮ ರಾಜಕಾರಣದಲ್ಲಿ ಮಹಿಳೆಯರ ಕಡೆಗಣನೆ ಲಿಂಗ ತಾರತಮ್ಯದಾಚೆಗೂ ವ್ಯಾಪಿಸಿಕೊಳ್ಳುತ್ತದೆ. ಇದು ನಮ್ಮ ರಾಜಕಾರಣ ಹಾಗೂ ಸರ್ಕಾರಗಳಲ್ಲಿ ಅಪರಾಧಿಗಳು, ಭ್ರಷ್ಟರ ಪ್ರಭಾವ ಹೆಚ್ಚಾದಂತೆ ಪ್ರಾಮಾಣಿಕ, ಸಭ್ಯ ರಾಜಕಾರಣಿಗಳ ಪ್ರಭಾವ ಕುಗ್ಗುವಿಕೆಯ ಪ್ರಕ್ರಿಯೆಯ ಭಾಗವೂ ಆಗಿರುತ್ತದೆ. ಚುನಾವಣಾ ರಾಜಕಾರಣದಲ್ಲಿ ನೆಲೆ ಉಳಿಸಿಕೊಂಡು ಪ್ರಾಮಾಣಿಕತೆಯನ್ನೂ ಕಾಪಾಡಿಕೊಳ್ಳುವುದು ಕ್ಲಿಷ್ಟಕರ ಎನ್ನುವ ಸನ್ನಿವೇಶ ಇದು. ಇಂತಹ ಭ್ರಷ್ಟ ವಾತಾವರಣದಲ್ಲಿ ಅಧಿಕಾರ, ಕಿತ್ತಾಟ, ಲೂಟಿಯಲ್ಲಿ ಪುರುಷ ರಾಜಕಾರಣಿಗಳನ್ನು ಅನುಕರಿಸುವಲ್ಲಿ ಸಮರ್ಥರಾದ ಮಹಿಳಾ ರಾಜಕಾರಣಿಗಳು ಮಾತ್ರ ಉಳಿದುಕೊಳ್ಳುವುದು ಸಾಧ್ಯ.

ಇಂದಿರಾ ಗಾಂಧಿ, ಜಯಲಲಿತಾ, ಮಾಯಾವತಿ, ಮುಂತಾದ ಮಹಿಳಾ ರಾಜಕಾರಣಿಗಳು ಅಧಿಕಾರದಲ್ಲಿದ್ದಾಗ ಭ್ರಷ್ಟ ಪುರುಷ ರಾಜಕಾರಣಿಗಳಂತೆಯೇ ಭ್ರಷ್ಟರು ಸರ್ವಾಧಿಕಾರಿಗಳಾದ ಉದಾಹರಣೆಗಳಿವೆ. ಈ ಮಹಿಳಾ ನಾಯಕಿಯ ಮಾದರಿಗಳು ಮಹಿಳಾ ಕಾಳಜಿಗಳನ್ನು ಧ್ವನಿಸುವಂತಹ ಪ್ರತೀಕಗಳೇನೂ ಅಲ್ಲ. ಇಡೀ ರಾಜಕೀಯ ಸ್ವರೂಪ ಬದಲಾಗದೇ ರಾಜಕೀಯಕ್ಕೆ ಬರೀ ಮಹಿಳೆಯ ಪ್ರವೇಶ ಹೊಸದೇನನ್ನೂ ತರದು.

ರಾಜಕಾರಣದಲ್ಲಿ ಸಂವಹನ, ಮೈತ್ರಿ ಮುಖ್ಯವಾದದ್ದು. ಆದರೆ ನಮ್ಮಲ್ಲಿನ ಸಾಂಸ್ಕೃತಿಕ ಕಾರಣಗಳಿಂದಾಗಿ ಪುರುಷರ ಜೊತೆಗಿನ ನಿಕಟ ಸಂಪರ್ಕವನ್ನು ಸಾಧಿಸುವುದು ಕ್ಲಿಷ್ಟಕರ. ಉಮಾಭಾರತಿಯ ಸ್ವತಂತ್ರ ಜನಪ್ರಿಯತೆಯನ್ನು ತಮ್ಮ ಅಧಿಕಾರಕ್ಕೆ ಬೆದರಿಕೆ ಎಂದು ಪರಿಗಣಿಸಿದ ಆಕೆ ಇದ್ದ ಬಿಜೆಪಿಯಲ್ಲಿನ ಪಕ್ಷದವರೇ ಆಕೆಯ ವಿರುದ್ಧ ನಡೆಸಿದ ಅಪನಿಂದೆಯ ಪ್ರಚಾರ ಆಕೆಯನ್ನು ಆತ್ಮಹತ್ಯೆಯ ಯತ್ನಕ್ಕೆ ದೂಡಿತ್ತು ಎಂಬುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಬಿಜೆಪಿಯ ನಾಯಕರೊಬ್ಬರ ಜೊತೆಗಿನ ಆಕೆಯ ವೈಯಕ್ತಿಕ ನಿಕಟತೆಯನ್ನು ಎಲ್ಲಾ ಬಗೆಯ ಕೆಟ್ಟ ವದಂತಿಗಳ ಪ್ರಚಾರಕ್ಕೆ ಬಳಸಿದ್ದರು. ಪುರುಷರ ಜೊತೆಗೆ ಮುಕ್ತವಾಗಿ ಬೆರೆಯಲು ಅಡ್ಡಿಗಳನ್ನು ಸೃಷ್ಟಿಸುವ ಪರಿಸರ ಇಲ್ಲಿ ಅಂತರ್ಗತವಾಗಿದೆ. ಆದರೆ ಪುರುಷರು ಈ ಬಗೆಯ ತಡೆಗೋಡೆಗಳನ್ನು ಹಾಕಿಕೊಳ್ಳುತ್ತಾ ತಮ್ಮ ಚಾರಿತ್ರ್ಯವನ್ನು ಸಾಬೀತು ಪಡಿಸಬೇಕಾದ ಅಗತ್ಯ ಇರುವುದಿಲ್ಲ.

ಮಹಿಳೆಯ ರಾಜಕೀಯ ಪಾಲ್ಗೊಳ್ಳುವಿಕೆಯನ್ನು ಭಾರತದ ಬಹುತೇಕ ಪುರುಷರು ಇಷ್ಟ ಪಡಬಹುದು. ಆದರೆ ಕುಟುಂಬ ಮಟ್ಟದಲ್ಲಿ ಅದರ ಸ್ವರೂಪ, ವರ್ತನೆಗಳ ಬದಲಾವಣೆಗೆ ನಿರಂತರ ಪ್ರಯತ್ನಗಳು ಬೇಕಾಗುತ್ತವೆ. ಸಾಂಸ್ಕೃತಿಕ

ಮೌಲ್ಯಗಳನ್ನು ಬದಲಿಸಿ ಮಹಿಳೆಯ ಮನೆ ಹೊಣೆಗಾರಿಕೆಗಳನ್ನು ಕಡಿಮೆ ಮಾಡುವ ಪ್ರಯತ್ನಗಳು ಅಷ್ಟು ಸುಲಭವಲ್ಲ.

ಕಾಕತಾಳೀಯವೆಂಬಂತೆ ಚುನಾವಣಾ ರಾಜಕಾರಣದಲ್ಲಿ ಸ್ವತಂತ್ರ ರಾಜಕೀಯ ನೆಲೆಯನ್ನು ಬೆಳೆಸಿಕೊಂಡು ಪುರುಷರ ಜೊತೆ ಸ್ಪರ್ಧಿಸುವ ಸಾಮರ್ಥ್ಯವುಳ್ಳವರಲ್ಲಿ ಬಹುತೇಕ ಮಂದಿ ಏಕಾಂಗಿ ಅಥವಾ ವಿಧವೆಯರು.

ಸಾಧಾರಣ ಮಹಿಳೆಯರಿಗೆ ಭಾರತೀಯ ಸಮಾಜ ಕರುಣೆ ತೋರುವುದಿಲ್ಲ. ಆದರೆ ಪುರುಷರಿಗಿಂತ ಹೆಚ್ಚು ಬಲಶಾಲಿಗಳೆಂಬಂತೆ ಸಾಬೀತು ಪಡಿಸಿದ ಮಹಿಳೆಯರನ್ನು ಭಾರತೀಯ ಮನಸುಗಳು ಆರಾಧಿಸುತ್ತವೆ.

ಯಶಸ್ವೀ ಮಹಿಳಾ ರಾಜಕಾರಣಿಗಳು ಮಹಿಳಾ ಹಿತಾಸಕ್ತಿಗಳನ್ನು ಪ್ರತಿನಿಧಿಸುತ್ತಿರುವುದಾಗಿ ಕಾಣಿಸಿಕೊಳ್ಳಲು ಇಷ್ಟ ಪಡುವುದಿಲ್ಲ.

ಸದ್ಯದ ಸಂದರ್ಭದಲ್ಲಿ ರಾಜಕೀಯದ ಸಾರ್ವಜನಿಕ ವಲಯದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಸಾಧ್ಯವಾದಷ್ಟು ರಾಜಕೀಯ ಹಿನ್ನೆಲೆ ಇರುವ ಬೆಂಬಲವಾಗಿ ನಿಲ್ಲುವ ಕುಟುಂಬದ ಅಗತ್ಯ ಇದೆ. ಕುಟುಂಬದ ಹೊಣೆಗಾರಿಕೆ ಅದರಲ್ಲೂ ಮಕ್ಕಳ ಹೊಣೆ ಹೊತ್ತುಕೊಳ್ಳಬಹುದಾದ ಬಂಧುಗಳ ಸಹಕಾರ, ಜೊತೆಗೆ ಕುಟುಂಬದಲ್ಲಿ ಸಾಕಷ್ಟು ಹಣವೂ ಇರಬೇಕಾಗುತ್ತದೆ.

ಗಾಂಧೀಜಿಯವರ ಚಿಂತನೆಗಳು:

1940ರಲ್ಲಿ ಶಾಂತಿನಿಕೇತನದಲ್ಲಿ ಮಹಿಳೆಯರನ್ನು ಉದ್ದೇಶಿಸಿ ಭಾಷಣ ಮಾಡುತ್ತಿದ್ದ ಗಾಂಧೀಜಿ ಅವರು 'ಮಹಿಳಾ ಸದಸ್ಯರ ಸಮರ್ಪಕ ಪಾಲು ಇಲ್ಲದ ಶಾಸನಸಭೆಯನ್ನು ನಾನು ಬಹಿಷ್ಕರಿಸುತ್ತೇನೆ' ಎಂದಿದ್ದರು.

ಇದಕ್ಕೂ ಮುಂಚೆ ಭಾರತಕ್ಕೆ ಹೊಸ ಸಂವಿಧಾನ ರಚಿಸಲು ಬ್ರಿಟಿಷ್ ಸರ್ಕಾರ ಲಂಡನ್‌ನಲ್ಲಿ ಕರೆದಿದ್ದ ಎರಡನೇ ದುಂಡು ಮೇಜಿನ ಪರಿಷತ್ ಸಭೆಯಲ್ಲಿ ಪಾಲ್ಗೊಂಡಿದ್ದರು ಗಾಂಧಿ. ಇಂಡಿಯನ್ ನ್ಯಾಷನಲ್ ಕಾಂಗ್ರೆಸ್‌ನ ಏಕೈಕ ಪ್ರತಿನಿಧಿಯಾಗಿ ಗಾಂಧಿ ಈ ಸಭೆಯಲ್ಲಿ ಪಾಲ್ಗೊಂಡಿದ್ದರು. ಇನ್ನಿತರ ಪ್ರತಿನಿಧಿಗಳು ವೈಸ್‌ರಾಯ್ ಲಾರ್ಡ್ ಇರ್ವಿನ್ ನಾಮಕರಣ ಮಾಡಿದ ಸದಸ್ಯರಾಗಿದ್ದರು.

ಅಲ್ಪಸಂಖ್ಯಾತರಿಗೆ ಸೂಕ್ತ ಪ್ರಾತಿನಿಧ್ಯ ನೀಡಲು ಶಾಸನಸಭೆಗಳಿಗೆ ಸದಸ್ಯರನ್ನು ನಾಮಕರಣ ಮಾಡುವ ಯಾವುದೇ ಯೋಜನೆಯ ಪರವಾಗಿ ಕಾಂಗ್ರೆಸ್ ಇಲ್ಲ. ಆದರೆ ಮಹಿಳೆಯಂತಹ ವಿಶೇಷ ವರ್ಗಗಳು ಸೇರಿದಂತೆ ಅಲ್ಪಸಂಖ್ಯಾತರಿಗೆ ಸಾಕಷ್ಟು ಪ್ರಾತಿನಿಧ್ಯ ನೀಡಲು ಅಭ್ಯರ್ಥಿಗಳ ಪ್ರಾಯೋಜನೆ ರಾಷ್ಟ್ರೀಯ ಸಂಘಟನೆಯ ಕರ್ತವ್ಯವಾಗಿದೆ. ಅವರನ್ನು ಹಾಗೇ ಬಿಟ್ಟು ಬಿಟ್ಟಲ್ಲಿ, ಅವರನ್ನು ಚುನಾಯಿಸಲು ಚುನಾಯಿತ ಶಾಸನಸಭೆಗೆ ಅನುವಾಗುವಂತೆ ಸಂವಿಧಾನದಲ್ಲಿ ವಿಧಿಯೊಂದನ್ನು ಅಳವಡಿಸುವುದರ ಪರ ತಾವಿರುವುದಾಗಿ ಗಾಂಧೀಜಿ ಹೇಳಿದ್ದರು.

ಗಾಂಧೀಜಿಯವರ 'ಹರಿಜನ್' ಪತ್ರಿಕೆಯ ಓದುಗರೊಬ್ಬರು ಚುನಾಯಿತ ಸಭೆಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಮಹಿಳೆಯರನ್ನು ಆಯ್ಕೆ ಮಾಡಲು ಕಾಂಗ್ರೆಸ್‌ಗೆ ಮನಸ್ಸಿಲ್ಲ ಎಂದು ಆರೋಪಿಸಿ ಸಮಾನತೆಯ ಆಧಾರದ ಮೇಲೆ ವಿವಿಧ ಸಂಸ್ಥೆಗಳಿಗೆ ಹೆಚ್ಚಿನ ಮಹಿಳೆಯರನ್ನು ತೆಗೆದುಕೊಳ್ಳುವುದು ಅಗತ್ಯವಲ್ಲವೆ ಎಂದು ಪ್ರಶ್ನಿಸಿದ್ದರು.

ಇದಕ್ಕೆ 'ಹರಿಜನ್' (ಏ.7, 1946)ಪತ್ರಿಕೆಯಲ್ಲಿ ಉತ್ತರಿಸುತ್ತಾ ಗಾಂಧೀಜಿಯವರು ಬರೆದದ್ದು ಹೀಗೆ:

"ಇಂತಹ ವಿಚಾರಗಳಲ್ಲಿ ಸಮಾನತೆ ಅಥವಾ ಮತ್ತೆಷ್ಟೋ ಪಾಲು ಎಂಬುದು ನನಗೆ ಒಗ್ಗದ ವಿಚಾರ. ಮೆರಿಟ್ ಅಥವಾ ಸಾಮರ್ಥ್ಯವೇ ಇಲ್ಲಿ ಮುಖ್ಯ, ಆದರೆ ಮಹಿಳೆಯರನ್ನು ಅಲ್ಲಗಳೆಯುವುದು ಸಂಪ್ರದಾಯವೇ ಆಗಿಬಿಟ್ಟಿದೆ. ಇದಕ್ಕೆ ವ್ಯತಿರಿಕ್ತವಾದ ಸಂಪ್ರದಾಯ ಮಹಿಳೆಯರಿಗೆ ಆದ್ಯತೆ ನೀಡುವುದಾಗಬೇಕು. ....(ಶಾಸನಸಭೆಗಳಲ್ಲಿ) ಲಿಂಗದ ಆಧಾರದ ಮೇಲೆ ಸದಸ್ಯತ್ವಕ್ಕೆ ಪಟ್ಟು ಹಿಡಿಯುವುದು ಅಪಾಯಕಾರಿ ಸಂಗತಿ. ಮಹಿಳೆಯರಾಗಲಿ ಅಥವಾ ಇನ್ಯಾವುದೇ ಗುಂಪಾಗಲಿ ಅನುಗ್ರಹದ ಆಶ್ರಯವನ್ನು ನಿರಾಕರಿಸಬೇಕು. ಅವರು ನ್ಯಾಯ ಕೇಳಬೇಕು, ಅನುಗ್ರಹವನ್ನಲ್ಲ. ಹೀಗಾಗಿ, ಸಮರ್ಪಕ ಕೆಲಸವೆಂದರೆ ತಮ್ಮ ಪ್ರಾದೇಶಿಕ ಭಾಷೆಗಳಲ್ಲಿ ಸಾಮಾನ್ಯ ಶಿಕ್ಷಣವನ್ನು ಪ್ರಸಾರ ಮಾಡುವುದು. ಆ ಮೂಲಕ ನಾಗರಿಕ ಪ್ರಜೆಗಳ ಅನೇಕ ಕರ್ತವ್ಯಗಳಿಗೆ ಅವರು ಸನ್ನದ್ಧರಾಗುವಂತೆ ಮಾಡುವುದು. ..."

"ಭ್ರಷ್ಟತೆ ಹಾಗೂ ಜಾತಿ ಆಧರಿತ ರಾಜಕೀಯ ಕೊನೆಗಾಣಿಸಲು ಮಹಿಳೆಯರ ಬೃಹತ್ ಮತಶಕ್ತಿಯ ಕುರಿತಾಗಿ ಚಿಂತಿಸಿದ ಬಹುಶಃ ಏಕೈಕ ಭಾರತೀಯ ನಾಯಕ ಗಾಂಧೀಜಿ. 1946ರ ಏಪ್ರಿಲ್ 21ರ 'ಹರಿಜನ್' ಪತ್ರಿಕೆಯ ಸಂಚಿಕೆಯಲ್ಲಿ ಗಾಂಧೀಜಿ ಸ್ತ್ರೀವಾದಿಗಳಿಗೆ ಹೇಳುವುದು ಹೀಗೆ: 'ಮಹಿಳಾ ಹಕ್ಕುಗಳು ಎಂದು ಕೂಗಾಡಬೇಡಿ. ಎಷ್ಟು ಸಾಧ್ಯವೋ ಅಷ್ಟು ಮಹಿಳೆಯರನ್ನು ಮತದಾರರಾಗಿ ನೋಂದಾಯಿಸಲು ಗಮನ ನೀಡಿ. ವ್ಯಾವಹಾರಿಕವಾದ ಶಿಕ್ಷಣ ನೀಡಿ. ಸ್ವತಂತ್ರವಾಗಿ ಯೋಚಿಸುವಂತೆ ಮಾಡಿ. ಅವರನ್ನು ಬಂಧಿಸಿರುವ ಜಾತಿ ಸಂಕೋಲೆಯಿಂದ ಬಿಡುಗಡೆ ಮಾಡಲು ಯತ್ನಿಸಿ. ಆ ಮೂಲಕ ಅವರಲ್ಲಾಗುವ ಬದಲಾವಣೆಗಳಿಂದ ಮಹಿಳೆಯ ರಾಜಕೀಯ ಶಕ್ತಿಯನ್ನು ಅರ್ಥ ಮಾಡಿ ಕೊಳ್ಳುವುದು ಪುರುಷರಿಗೆ ಅನಿವಾರ್ಯವಾಗುತ್ತದೆ. ಜೊತೆಗೆ ಆಕೆಯ ತ್ಯಾಗದ ಸಾಮರ್ಥ್ಯ ಅರಿತು ಆಕೆಗೆ ಗೌರವದ ಸ್ಥಾನ ನೀಡುವುದೂ ಅನಿವಾರ್ಯವಾಗುತ್ತದೆ. ಮಹಿಳಾ ಕಾರ್ಯಕರ್ತರು ಇದನ್ನು ಮಾಡಿದಲ್ಲಿ ಅವರು ಸದ್ಯದ ಅಶುದ್ಧ ರಾಜಕೀಯ ವಾತಾವರಣವನ್ನು ಶುದ್ಧಗೊಳಿಸಿದಂತಾಗುತ್ತದೆ. ..."

ಅಸ್ಪೃಶ್ಯತೆ ತೊಡೆಯುವ ಹೋರಾಟವಲ್ಲದೆ ಮಹಿಳೆ ಕುರಿತ ಪಾರಂಪರಿಕ ದೃಷ್ಟಿಕೋನಗಳಲ್ಲಿ ಗಾಂಧೀಜಿಯವರು ತಂದ ಕ್ರಾಂತಿಕಾರಕ ಬದಲಾವಣೆಗಳೂ ಸಮಾಜ ಸುಧಾರಣೆ ಹಾದಿಯಲ್ಲಿ ಮುಖ್ಯವಾದುದು.

ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಪುರುಷರ ಜೊತೆ ಸರಿಸಮನಾಗಿ ಸತ್ಯಾಗ್ರಹ ಚಳವಳಿಯಲ್ಲಿ ಪಾಲ್ಗೊಳ್ಳಲು ಗಾಂಧೀಜಿ ಮಹಿಳೆಯರಿಗೆ ಕರೆ ನೀಡಿದರು.

1930ರ ದಶಕದಲ್ಲಿ ಪುರುಷರ ಜೊತೆ ಜೊತೆಗೆ ಮಹಿಳೆಯರೂ ಸತ್ಯಾಗ್ರಹ ಚಳವಳಿಯಲ್ಲಿ ಪಾಲ್ಗೊಳ್ಳಬೇಕು ಎಂದು ಗಾಂಧೀಜಿ ಕರೆ ನೀಡಿದರು. ಉಪ್ಪಿನ ಸತ್ಯಾಗ್ರಹದ ಅವಧಿಯಲ್ಲಿ ಬಂಧನಕ್ಕೊಳಗಾದ ಸುಮಾರು 30,000 ಮಂದಿಯಲ್ಲಿ 17,000 ಜನರು ಮಹಿಳಾ



ಕಾರ್ಯಕರ್ತರಾಗಿದ್ದರು ಎಂಬುದೇ ಮಹಾತ್ಮ ನಾಯಕತ್ವದಲ್ಲಿ ಮಹಿಳೆಯರು ಸಮಾನ ಪಾತ್ರ ನಿರ್ವಹಿಸುತ್ತಿದ್ದರೆಂಬುದರ ದ್ಯೋತಕ.

ತಮ್ಮ ಹಕ್ಕುಗಳಿಗಾಗಿ ಹೋರಾಡುವಾಗ ಭಾರತದ ಮಹಿಳೆಯರು ಪಶ್ಚಿಮ ರಾಷ್ಟ್ರಗಳನ್ನು ಅನುಕರಣೆ ಮಾಡಬಾರದೆಂಬುದು ಗಾಂಧೀಜಿಯವರ ಆಶಯವಾಗಿತ್ತು. ಸೀತಾ, ದ್ರೌಪದಿ, ಸಾವಿತ್ರಿ, ದಮಯಂತಿಯಂತಹ ಪಾತ್ರಗಳಿಂದ ಪ್ರೇರಣೆ ಪಡೆದುಕೊಳ್ಳಬೇಕೆಂದು ಅವರು ತಮ್ಮ ಪತ್ರಿಕಾ ಬರಹಗಳಲ್ಲಿ ಬರೆದಿದ್ದರು.

ಸೀತಾ, ದ್ರೌಪದಿಯಂತಹ ಪುರಾಣದ ಪಾತ್ರಗಳನ್ನು ಅನುಕರಿಸುವಾಗ, ಸಾಮಾನ್ಯವಾಗಿ ಹೇಳಲಾಗುವ ಪುರುಷರೊಂದಿಗಿನ ಅವರ ವಿಧೇಯತೆಯನ್ನಲ್ಲ, ಅವರ ಸ್ವತಂತ್ರ ಮನೋಭಾವವನ್ನು ಅನುಕರಿಸಬೇಕು ಎಂದು ಗಾಂಧೀಜಿ ಹೇಳುತ್ತಿದ್ದರು. 'ಎಷ್ಟೇ ಮುಕ್ತ ಹಾಗೂ ಸ್ವತಂತ್ರನಾಗಿದ್ದರೂ ಸೀತಾ ಇಲ್ಲದೆ ರಾಮ ಇಲ್ಲ. ಎಂದು ಗಾಂಧೀಜಿ ಯೆಂಗ್ ಇಂಡಿಯಾ (ಫೆ. 3, 1927)ದಲ್ಲಿ ಬರೆದಿದ್ದರು. ಆದರೆ ಮುಕ್ತ ಸ್ವಾತಂತ್ರ್ಯಕ್ಕೆ ದ್ರೌಪದಿ ಬಹುಶಃ ಉತ್ತಮ ಉದಾಹರಣೆ ಎಂದೂ ಗಾಂಧಿ ಬರೆದಿದ್ದರು.

1946ರ ಜನವರಿ 27ರಂದು ಮದ್ರಾಸ್‌ನ ನಿರ್ಮಾಣ ಕಾರ್ಮಿಕರ ಸಮ್ಮೇಳನದಲ್ಲಿ ಮಾತನಾಡಿದ್ದ ಗಾಂಧೀಜಿ, ಜನರಿಗೆ ಸೇವೆ ಮಾಡುವ ಉದ್ದೇಶದಿಂದ ಮಹಿಳೆಯರು ಶಾಸನಸಭೆಗಳನ್ನು ಪ್ರವೇಶಿಸಬೇಕು. ಪಕ್ಷದ ರಾಜಕಾರಣ ಮಾಡುವುದಕ್ಕಲ್ಲ ಎಂದಿದ್ದರು.

ಈ ಅಂತರ ಮುಚ್ಚುವುದು ಸಾಧ್ಯವೆ?

ಭಾರತದ ಜನಸಂಖ್ಯೆಯಲ್ಲಿ ಪುರುಷರ ಪಾಲು ಶೇ. 51.73 2004ರ ಸಾರ್ವತ್ರಿಕ ಚುನಾವಣೆಯಲ್ಲಿ ಪುರುಷ ಮತದಾರರ ಪ್ರಮಾಣ ಶೇ. 55.8 ಶೇ. 91ರಷ್ಟು ಚುನಾಯಿತ ಪ್ರತಿನಿಧಿಗಳು ಹಾಗೂ ಶೇ. 91.4ರಷ್ಟು ರಾಜ್ಯಸಭಾದ ಚುನಾಯಿತ ಪ್ರತಿನಿಧಿಗಳು ಪುರುಷರು. ಕೇಂದ್ರದ ಬಹುತೇಕ 34 ರಾಜ್ಯ ಸಚಿವರು ಪುರುಷರು. 32 ಕ್ಯಾಬಿನೆಟ್ ಸಚಿವರಲ್ಲಿ 30 ಮಂದಿ ಪುರುಷರು.

ಭಾರತದ ಜನಸಂಖ್ಯೆಯಲ್ಲಿ ಮಹಿಳೆಯರ ಪ್ರಮಾಣ ಶೇ. 48.26 2004ರ ಸಾರ್ವತ್ರಿಕ ಚುನಾವಣೆಯಲ್ಲಿ ಮಹಿಳಾ ಮತದಾರರ ಪ್ರಮಾಣ ಶೇ. 44.2 ಶೇ. 9.2 ಲೋಕಸಭೆಯ ಚುನಾಯಿತ ಪ್ರತಿನಿಧಿಗಳು ಹಾಗೂ ಶೇ. 8.6ರಷ್ಟು ರಾಜ್ಯಸಭಾದ ಚುನಾಯಿತ ಪ್ರತಿನಿಧಿಗಳು ಮಹಿಳೆಯರು. ಕೇವಲ ಕೇಂದ್ರದ 6 ರಾಜ್ಯ ಸಚಿವರು ಮಹಿಳೆಯರು. 32 ಕ್ಯಾಬಿನೆಟ್ ಸಚಿವರಲ್ಲಿ ಇಬ್ಬರು ಮಾತ್ರ ಮಹಿಳೆಯರು.


ಕಳೆದ ಅರ್ಧ ಶತಮಾನಕ್ಕೂ ಹೆಚ್ಚು ವರ್ಷಗಳಿಂದಲೂ ಶೇ. 10ರ ಕೆಳಗೇ ಮಹಿಳಾ ಪ್ರಾತಿನಿಧ್ಯ ಗಿರಕಿ ಹೊಡೆಯುತ್ತಿದೆ. ಮಹಿಳೆಯನ್ನು ದೇವತೆಯೆಂದು ಪೂಜಿಸುವ ರಾಷ್ಟ್ರದಲ್ಲಿ ಅಧಿಕಾರ ರಾಜಕಾರಣದಲ್ಲಿ ಮಹಿಳೆಯರು ಪಡೆದಿರುವ ಶೋಚನೀಯ ಪ್ರಾತಿನಿಧ್ಯ ಇದು.

ನಮ್ಮ ನೆರೆಯ ರಾಷ್ಟ್ರಗಳು ಈಗಾಗಲೇ ಮಹಿಳಾ ಕೋಟಾ ಜಾರಿ ಮಾಡಿವೆ. ನೇಪಾಳದಲ್ಲಿ ಶೇ. 33, ಪಾಕಿಸ್ತಾನದಲ್ಲಿ ಶೇ. 22 ಹಾಗೂ ಬಾಂಗ್ಲಾದೇಶದಲ್ಲಿ ಶೇ. 14 ಮೀಸಲು ಸೌಲಭ್ಯ ಇದೆ, ಆದರೆ ನಮ್ಮಲ್ಲಿ 1996ರ ಸೆಪ್ಟೆಂಬರ್‌ನಲ್ಲಿ ಸಂಸತ್ತಿನಲ್ಲಿ ಮೊದಲ ಬಾರಿಗೆ ಮಂಡಿಸಲೆತ್ನಿಸಿದ ಶೇ. 33ರಷ್ಟು ಮೀಸಲು ಸೌಲಭ್ಯ ಕಲ್ಪಿಸುವ ಮಹಿಳಾ ಮೀಸಲು ಅನಂತರವೂ ಹಲವು ಬಾರಿ ಮಂಡನೆ ನಾಟಕಗಳೊಂದಿಗೆ ನೆನೆಗುದಿಗೆ ಸಿಲುಕಿದೆ.

ಮಾಹಿತಿ ನೆರವು

- *ವಿಮೆನ್ಸ್ ಮಾರ್ಜಿನಲ್ ರೋಲ್ ಇನ್ ಪಾಲಿಟಿಕ್ಸ್ : ಮಧು ಕಿಷ್ವರ್. ಮಾನುಷಿ*
- *ಗಾಂಧಿ ಆನ್ ವಿಮೆನ್ ಇನ್ ಪಾಲಿಟಿಕ್ಸ್ : ಎ ವಾಯ್ಸ್ ಫ್ರಮ್ ದಿ ಪಾಸ್ಟ್ – ಲಾ.ಸು. ರಂಗರಾಜನ್ (ದಿ ಹಿಂದೂ).*

❑



ಜಾಗ

ಎಲ್ಲರಿಗು ಉಣಿಸುವಳು
ಅದಕ್ಕೇ ಉಣ್ಣುವಳು
ಎಲ್ಲರದೂ ಉಂಡು ಆದಮೇಲೆ
ಕುಡಿಸುತ್ತಾಳೆ
ಅದಕ್ಕೇ ತಾನೆಂದೂ
ಸ್ವತಃ ಕುಡಿಯಲಾರಳು.
ಜನನಿ ಆಕೆ
ಧರಣಿ ಆಕೆ
ಅದಕ್ಕೇ ಈ ಪೃಥ್ವಿಯ ಮೇಲೆ
ಮೈಚಾಚಲಿಕ್ಕೆ ಇಲ್ಲ ಪೂರ್ತಿ ಜಾಗ...

(ಹಿಂದಿ ಮೂಲ : ಪ್ರೇಮರಂಜನ್ ಅನಿಮೇಶ್
ಆಧಾರ : 'ಕಥಾದೇಶ್' ಮಾಸಪತ್ರಿಕೆ)








ಅಮರ ಗಾಯಕಿ ಅಮೀರ್‌ಬಾಯಿ

■ *ಎನ್.ಎಸ್. ಶ್ರೀಧರ ಮೂರ್ತಿ*


ಅಮೀರ್‌ಬಾಯಿ ಕರ್ನಾಟಕಿಯವರ ಕುರಿತು ನನಗೆ ಕುತೂಹಲ ಮೂಡಿಸಿದ್ದು ಎಂ.ಆರ್. ವಿಠಲ್ ಅವರ ಜೀವನ ಚರಿತ್ರೆ ಬರೆಯಲು ಮಾಹಿತಿಗಳನ್ನು ಹುಡುಕುತ್ತಿದ್ದಾಗ. ವಿಠಲ್ ತಾವು ಅಮೀರ್‌ಬಾಯಿಯವರನ್ನು ಭೇಟಿಯಾದ ಪ್ರಸಂಗವನ್ನು ತಮ್ಮ ಆತ್ಮಕತೆಯಲ್ಲಿ ಸುದೀರ್ಘವಾಗಿ ಉಲ್ಲೇಖಿಸಿದ್ದಾರೆ. ಈ ಕುರಿತು ಕೆಲವು ಮಹತ್ವದ ಟಿಪ್ಪಣಿಗಳನ್ನು ಮಾಡಿದ್ದಾರೆ. ಈ ಪ್ರಸಂಗ ಅಮೀರ್‌ಬಾಯಿಯವರ ವ್ಯಕ್ತಿತ್ವಕ್ಕೆ ನಿದರ್ಶನವಾಗಬಲ್ಲದಾದ್ದರಿಂದ, ಈ ಲೇಖನವನ್ನು ಅಲ್ಲಿಂದಲೇ ಆರಂಭಿಸುತ್ತೇನೆ. ವಿಠಲ್ ತಮ್ಮ ಜೀವನದ ಹಾದಿ ಹುಡುಕುತ್ತಾ ಮುಂಬೈನಲ್ಲಿ ಹೋಗಿ ರೇಗೆ ಸಾಹೇಬರನ್ನು ಭೇಟಿ ಮಾಡುತ್ತಾರೆ. ಅಲ್ಲಿ ಪರಿಚಿತರಾದ ಮೆಹ್ತಾ, ವಿಠಲ್ ಅವರ ಸಾಮರ್ಥ್ಯ ಅರಿಯಲು ರಣಜಿತ್ ಸ್ಟುಡಿಯೋಗೆ ಕರೆದೊಯ್ಯುತ್ತಾರೆ. ಅಲ್ಲಿ ಝುಂಡೇಖಾನ್ ಚಿತ್ರೀಕರಣ ನಡೆಸುತ್ತಿರುತ್ತಾರೆ. ಅದನ್ನು ಮುಂದುವರಿಸಲು ವಿಠಲ್‌ಗೆ ಹೇಳುತ್ತಾರೆ. ಆ ಚಿತ್ರೀಕರಣದಲ್ಲಿ ಭಾಗವಹಿಸಿದ್ದ ಕಲಾವಿದೆ ಅಮೀರ್ ಬಾಯಿ ಕರ್ನಾಟಕಿ. ವಿಠಲ್ ಕನ್ನಡದವರು ಎಂದು ತಿಳಿಯುತ್ತಲೇ ಅಮೀರ್‌ಬಾಯಿ ಕನ್ನಡದಲ್ಲೇ ಸಂಭಾಷಣೆಗೆ ತೊಡಗುತ್ತಾರೆ. ಅದು ಒಂದು ಹಾಡಿನ ದೃಶ್ಯ, 'ಕುಳಿತು ಹಾಡಲು ಬೇಜಾರು ಒಂದಿಷ್ಟು ಓಡಾಡಲು ಅವಕಾಶ ಕಲ್ಪಿಸಿ' ಎಂದು ಅಮೀರ್‌ಬಾಯಿ ವಿಠಲ್ ಅವರನ್ನು ಕೇಳಿದರು. ವಿಠಲ್ ಅವರು ಓಡಾಡುತ್ತಲೇ ಚಿತ್ರೀಕರಿಸುತ್ತಾ ಹಾಡನ್ನು ಧ್ವನಿ ಮುದ್ರಿಸುತ್ತಾರೆ. ಈ ಪ್ರಸಂಗ ವಿಠಲ್ ಜೀವನಕ್ಕೆ ದೊಡ್ಡ ತಿರುವನ್ನು ನೀಡಿತು. ಈ ಚಿತ್ರೀಕರಣ ಯಶಸ್ವಿಯಾಗಿದ್ದರಿಂದ ಅವರಿಗೆ ಲಾಹೋರ್‌ಗೆ ತೆರಳಲು ಅವಕಾಶ ಸಿಕ್ಕಿತು. ಇದು 1937ರ ಪ್ರಸಂಗ, ಇದರ ಜೊತೆ ವಿಠಲ್ ಕೆಲವು ಕುತೂಹಲದ ಸಂಗತಿಗಳನ್ನು ದಾಖಲಿಸುತ್ತಾರೆ. ಒಂದು, ಅಮೀರ್‌ಬಾಯಿ ಚೆಲುವೆಯಾದ್ದರಿಂದ ಅವರನ್ನು ಅಭಿನಯಿಸಲು ಒತ್ತಾಯಿಸಲಾಗುತ್ತಿತ್ತು. ಆಗೆಲ್ಲ ವಾಕ್ಚಿತ್ರಗಳಲ್ಲಿ ಕಲಾವಿದೆಯರು ತಾವೇ ಹಾಡುತ್ತಾ ಅಭಿನಯಿಸಬೇಕಾದ್ದರಿಂದ ಅದು ಅನಿವಾರ್ಯವೂ ಆಗಿತ್ತು. ಆದರೆ ಅಮೀರ್‌ಬಾಯಿ ಅವರಿಗೆ ಅಭಿನಯ ಇಷ್ಟವಿರಲಿಲ್ಲ, ಅವರು ಗಾಯನಕ್ಕೂ ಅವಕಾಶ ಸಿಕ್ಕುತ್ತದೆ ಎಂಬ ಏಕೈಕ ಕಾರಣದಿಂದ ಅಭಿನಯ ಒಪ್ಪಿಕೊಂಡಿದ್ದರು ಎಂದು ವಿಠಲ್ ಹೇಳುತ್ತಾರೆ. ಗಾಯನವೇ ಅಮೀರ್ ಬಾಯಿಯವರ ಮೊದಲ ಮತ್ತು ಕೊನೆಯ ಆಯ್ಕೆಯಾಗಿತ್ತು. ಎರಡನೆಯದು ಅಮೀರ್‌ಬಾಯಿಯವರಿಗೆ ಕನ್ನಡ ಚಿತ್ರದಲ್ಲಿ ನಟಿಸಬೇಕು, ಹಾಡಬೇಕು ಎಂಬ ತೀವ್ರವಾದ ಅಪೇಕ್ಷೆ ಇತ್ತು. ಈ ಎರಡೂ ಅಂಶಗಳೇ ಅವರ ವ್ಯಕ್ತಿತ್ವಕ್ಕೆ ನಿದರ್ಶನವಾಗಿದೆ. ಈ ಅಂಶಗಳಿಂದ ಆಕರ್ಷಿತವಾಗಿ ಚರಿತ್ರೆಯ ಪುಟಗಳಿಗೆ ಇಳಿದು ಹುಡುಕಿದ ಕತೆ ಇಲ್ಲಿದೆ.

ಬೀಳಗಿಯಲ್ಲಿದ್ದವು ಬೇರುಗಳು

ಅಮೀರ್‌ಬಾಯಿ ಕರ್ನಾಟಕಿ ಜನಿಸಿದ್ದು 1911ರ ಜುಲೈ 12 ರಂದು, ಈಗಿನ ಬಾಗಲಕೋಟೆ ಜಿಲ್ಲೆಯ ಬೀಳಗಿಯಲ್ಲಿ. ತಂದೆ ಹಸನ್‌ಸಾಬ್ ತಬಲಾ ಕಲಾವಿದ. ತಾಯಿ ಅಮೀನ. ಈ ದಂಪತಿಗಳಿಗೆ ಆರು ಜನ ಮಕ್ಕಳು. ಅಮೀರ್‌ಬಾಯಿ ಎರಡನೆಯವರು. ಅಹಲ್ಯಾಬಾಯಿ ಅಕ್ಕ, ಗೋಹರ್‌ಬಾಯಿ, ಬಡೇಮಾ, ಡೇಂಗ್ರಿಮಾ ತಂಗಿಯರು ಮತ್ತು

ದಸ್ತಗೀರ್ ತಮ್ಮ. ಇವರದು ಮೂಲತಃ ಕಲಾವಂತರ ಮನೆತನ. ಸೋದರಿಯರು ತಮ್ಮ ಮನೆತನದ ಕಲೆಯ ಜೊತೆಗೆ ಶಾಸ್ತ್ರೀಯ ಸಂಗೀತವನ್ನೂ ಕಲಿತರು. ಆಗೆಲ್ಲಾ ನಾಟಕ ಕಂಪನಿಗಳಿಗೆ ಗಾಯಕಿಯರ ಅವಶ್ಯಕತೆ ಬಹಳ ವಾಗಿತ್ತು. ಹೀಗಾಗಿ ಸೋದರಿಯರಿಗೆ ಅನೇಕ ಕಂಪನಿಗಳಿಂದ ಆಹ್ವಾನ ಬಂದಿತು. ಕೊನೆಗೆ ಪ್ರಸಿದ್ಧರಾದ ಬಾಲಗಂಧರ್ವರ ಆಹ್ವಾನವನ್ನು ಅಂಗೀಕರಿಸಿ ಅವರು ಬಿಜಾಪುರಕ್ಕೆ ಬಂದರು. ಮುಂದೆ ಅಮೀರ್‌ಬಾಯಿಯವರ ಸೋದರಿ ಗೋಹರ್ ಬಾಲಗಂಧರ್ವರನ್ನೇ ಸಂಗಾತಿಯಾಗಿ ಆರಿಸಿಕೊಂಡರು. ಅಮೀರ್‌ಬಾಯಿ 15 ವರ್ಷದವರಿರುವಾಗಲೇ ಹೆಚ್.ಎಂ.ವಿ ಆಕೆಯಿಂದ ಖವ್ವಾಲಿ ಹಾಡಿಸಿತ್ತು. ಅದು ಅವರನ್ನು ಹಲವರು ಗಮನಿಸಲು ಕಾರಣವಾಯಿತು. ಸೋದರಿಯರ ಪೈಕಿ ಚೆಲುವೆಯಾಗಿದ್ದವರು ಅಮೀರ್‌ಬಾಯಿ. ಈ ಕಾರಣಕ್ಕೇ ಚಿತ್ರರಂಗ ಅವರನ್ನು ಸೆಳೆದುಕೊಂಡಿತು. ಅವರ ಸೋದರಿ ಗೋಹರ್ ಮೊದಲು ಚಿತ್ರರಂಗದಲ್ಲಿ ಅಭಿನಯಿಸಿದರು. ಅವರ ಪ್ರಭಾವದಿಂದಲೇ ಕೇವಲ ಮೆಟ್ರಿಕ್ಯುಲೇಷನ್ ಓದಿದ್ದ ಅಮೀರ್‌ಬಾಯಿ 1926ರಲ್ಲಿ ಅಂದರೆ ತಮ್ಮ 15ನೇ ವಯಸ್ಸಿಗೆ ಮುಂಬೈಗೆ ಬಂದರು. ಮೂಕಿ ಚಿತ್ರಗಳು ಪ್ರದರ್ಶಿತ ವಾಗುತ್ತಿದ್ದಾಗ ಈ ಸೋದರಿಯರು ಅದರ ಜೊತೆ ಹಾಡುವ ಕೆಲಸದಲ್ಲಿ ತಮ್ಮ ಹೊಟ್ಟೆಪಾಡನ್ನು ಕಂಡುಕೊಂಡರು. ವಾಕ್ಚಿತ್ರ ಯುಗ ಆರಂಭವಾದಾಗ ಅವಕಾಶಗಳು ದೊರೆಯ ಲಾರಂಭಿಸಿದವು. ಅಮೀರ್‌ಬಾಯಿ ಅಭಿನಯಿಸಿದ ಮೊದಲ ಚಿತ್ರ ವಿಷ್ಣುಭಕ್ತಿ (1934). ಮುಂದಿನ ಆರು ವರ್ಷದ ಒಳಗಾಗಿ ಭಾರತ್ ಕೆ ಬೇಟಿ, ಯಾಸ್ಮಿನ್, ಪ್ರೇಮ ಬಂಧನ್, ದುಃಖಿಯಾರಿ, ನರಸಿಭಗತ್, ಹಮಾರಾದೇಶ್, ಸರ್ದಾರ್, ಭಕ್ತಿ ಚಮಾಲಾ, ದರ್ಶನ್ ಹೀಗೆ ಒಂಬತ್ತು ಚಿತ್ರಗಳು ದೊರೆತವು. ಎಲ್ಲವೂ ಹಾಡುವಿಕೆಗೆ ಅವಕಾಶವಿದ್ದ ಚಿಕ್ಕ ಪಾತ್ರಗಳೇ. ಆದರೆ ದೊಡ್ಡ ಪ್ರಮಾಣದ ಅವಕಾಶ ಸಿಕ್ಕಿದ್ದು



ಸೋದರಿಯರೊಂದಿಗೆ

ಕಿಸ್ಮತ್ (1943) ಚಿತ್ರದಲ್ಲಿ. ಇದರಲ್ಲಿ ನಾಯಕರಾಗಿದ್ದವರು ಅಶೋಕ್ ಕುಮಾರ್. ಇದರಲ್ಲಿ ಅಮೀರ್‌ಬಾಯಿ ಹಾಡಿದ 'ದೂರ್ ಹಟೋ ಓ ದುನಿಯಾ ವಾಲೋಂ' 'ಘರ್ ಘರ್‌ಮೆ ಮೇ ದಿವಾಲಿ' 'ಧೀರೆ ಧೀರೆ ಆರೆ ಬಾದಲ್' ಗೀತೆಗಳು ಬಹು ಪ್ರಸಿದ್ಧವಾದವು. ಅನಿಲ್ ಬಿಸ್ವಾಸ್ ಅವರ ಸಂಗೀತ ನಿರ್ದೇಶನದಲ್ಲಿ ಅಮೀರ್‌ಬಾಯಿ ಶ್ರೇಷ್ಠವಾದ ಗಾಯನ ನೀಡಿದ್ದರು. ಚಿತ್ರ ಕೂಡ ಕೊಲ್ಕತ್ತಾದಲ್ಲಿ ಮೂರು ವರ್ಷಗಳ ದಾಖಲೆ ಪ್ರದರ್ಶನ ಕಂಡಿದ್ದರಿಂದ ಅಮೀರ್‌ಬಾಯಿ ಪ್ರಸಿದ್ಧರಾದರು. ಆದರೆ ಅವರಿಗೆ ಸಿಕ್ಕ ಹೆಚ್ಚಿನ ಅವಕಾಶಗಳು ಅಭಿನಯಕ್ಕೇ ಒತ್ತು ನೀಡುವಂತಿದ್ದವು. ಇದು ಒಂದು ಅರ್ಥದಲ್ಲಿ ಸಂಧಿಗ್ಧದ ಕಾಲ. 1947ರಲ್ಲಿ ಆಮ್ರಪಾಲಿ ಮತ್ತು ಶಿಕಾರಿ ಚಿತ್ರಗಳಲ್ಲಿ ಅವರ ಗೀತೆಗಳು ಪ್ರಸಿದ್ಧವಾದವು. ಅದೇ ವರ್ಷ ಅವರು ವಹಾಬ್ ಪಿಕ್ಚರ್ಸ್‌ನವರ ಶಹನಾಜ್ ಚಿತ್ರದ ಸಂಗೀತ ನಿರ್ದೇಶನ ಕೂಡ ಮಾಡಿದ್ದರು. ಇಲ್ಲಿಂದ ಮುಂದೆ ಗಾಯನದತ್ತಲೇ ತಮ್ಮನ್ನು ಹೆಚ್ಚು ತೊಡಗಿಸಿ ಕೊಂಡರು. ಮರಾಠಿ, ಗುಜರಾತಿ ಚಿತ್ರಗಳಲ್ಲೂ ಕೂಡ ಹಾಡಿದರು. ಪ್ರಸಿದ್ಧ ಖಳನಟರಾದ ಹಿಮಾಲಯವಾಲಾ ಅವರನ್ನು ಪ್ರೇಮಿಸಿ ವಿವಾಹವಾಗಿದ್ದ ಅಮೀರ್‌ಬಾಯಿ ದಾಂಪತ್ಯ ಸುಖಕರವಾಗಿರಲಿಲ್ಲ. ಅವರಿಂದ ವಿಚ್ಛೇದನ ಪಡೆದ ಮೇಲೆ ಗುಜರಾತಿ ಪತ್ರಕರ್ತ ಮತ್ತು ಸಂಕಲಕಾರ ಬದ್ರಿ ಕಾಂಚನವಾಲಾ ಅವರನ್ನು ವಿವಾಹವಾದರು. ಈ ದಾಂಪತ್ಯ ಸುಖಕರವಾಗಿದ್ದುದಷ್ಟೇ ಅಲ್ಲ ಅಮೀರ್‌ಬಾಯಿ ವೃತ್ತಿಜೀವನಕ್ಕೆ ಅತ್ಯಗತ್ಯವಾದ ಶಿಸ್ತನ್ನು ತಂದಿತು. ಲತಾ ಮಂಗೇಶ್ಕರ್ ಪ್ರಸಿದ್ಧ ರಾದಂತೆ ಅಮೀರ್‌ಬಾಯಿ ಯುಗ ಕ್ರಮೇಣ ಕೊನೆಗೊಂಡಿತು. ಅಮೃತ್ ಮಂಥನ್, ಬಾಯ್‌ಫ್ರೆಂಡ್ (1961)ನಂತರ ಮುಂದೆ ಅವರು ಅನಾರೋಗ್ಯದ ಕಾರಣ ಹಾಡಲಿಲ್ಲ.



ಲತಾ ಜೊತೆ ಅಮೀರ್‌ಬಾಯಿ

ಕನ್ನಡ ಚಿತ್ರರಂಗ ಮತ್ತು ಅಮೀರ್‌ಬಾಯಿ

ಕನ್ನಡ ಚಿತ್ರರಂಗದಲ್ಲಿ ಅಮೀರ್‌ಬಾಯಿ ಅವರಿಗೆ ಅವರು ಅಪೇಕ್ಷೆಪಟ್ಟಷ್ಟು ಅವಕಾಶಗಳು ಸಿಕ್ಕದೇ ಹೋದರೂ ಕೆಲಮಟ್ಟಿನ ನಂಟು ಇದ್ದೇ ಇದೆ. ಅದು ಭಾವನಾತ್ಮಕವಾಗಿಯೂ ತೃಪ್ತಿ ನೀಡುವ ವಿಷಯ. ಕರ್ನಾಟಕ ಟಾಕೀಸ್‌ನವರ ಚಿರಂಜೀವಿ (1937) ಅವರು ಅಭಿನಯಿಸಿದ ಮೊದಲ ಕನ್ನಡ ಚಿತ್ರ. ಇದರಲ್ಲಿ ಅವರು ಹಾಡಿದ 'ಮಧುರ ಮಧುರ' ಗೀತೆ ಪ್ರಸಿದ್ಧವಾಗಿತ್ತು. ಮುಂದೆ ಅನೇಕ ವರ್ಷಗಳ ನಂತರ ತಮ್ಮ ಉಚ್ಛ್ರಾಯ ಸ್ಥಿತಿಯಲ್ಲೇ ಅಮೀರ್‌ಬಾಯಿಯವರಿಗೆ ಮತ್ತೆ ಕನ್ನಡ ಚಿತ್ರರಂಗದ ನಂಟು ಬೆಳೆಯಿತು. 1947ರಲ್ಲಿ ಪಂಪಾ ಪಿಕ್ಚರ್ಸ್‌ನವರು 'ಚಂದ್ರಹಾಸ' ಚಿತ್ರವನ್ನು ನಿರ್ಮಿಸಿದಾಗ, ಅದಕ್ಕೆ ಮಲ್ಲಿಕಾರ್ಜುನ ಮನ್ಸೂರ್ ಅವರು ಸಂಗೀತ ನೀಡಿದ್ದರು. ಅವರು ಅಮೀರ್‌ಬಾಯಿ ತಮ್ಮ ಚಿತ್ರದಲ್ಲಿರಲಿ ಎಂದು ಅಪೇಕ್ಷಿಸಿದರು. ಆಗ ಅಮೀರ್‌ಬಾಯಿ ಹಿಂದಿ ಚಿತ್ರರಂಗದಲ್ಲಿ ಬಹು



ಬಾಲಗಂಧರ್ವರು, ಗೋಹರಬಾಯಿ ಶಿವಾಜಿಗಣೇಶನ್ ಮತ್ತು ಅಮೀರಬಾಯಿ ಸೋದರಳಿಯ ಶೌಕತ್ (ಕನ್ನಡಕ ಹಾಕಿರುವ ವ್ಯಕ್ತಿ)

ಬೇಡಿಕೆಯ ಗಾಯಕಿ ಕಲಾವಿದೆಯಾಗಿದ್ದರು. ಕನ್ನಡ ಚಿತ್ರರಂಗಕ್ಕೆ ಹೆಚ್ಚಿನ ಸಮಯ ನೀಡುವ ಸ್ಥಿತಿಯಲ್ಲಿರಲಿಲ್ಲ. ಹೀಗಾಗಿ ವರ್ಷಗಟ್ಟಲೆ ಚಿತ್ರೀಕರಣ ನಡೆಯುತ್ತಿದ್ದ ಕಾಲದಲ್ಲಿ ಪ್ರಮುಖ ಪಾತ್ರ ನಿರ್ವಹಿಸುವುದು ಕಷ್ಟವಾಗುತ್ತಿತ್ತು. ಹೀಗಾಗಿ ಚಂದ್ರಹಾಸನನ್ನು ಬೆಳೆಸುವ ಸಾಕುತಾಯಿಯ ಚಿಕ್ಕ ಪಾತ್ರ ನಿರ್ವಹಿಸಿದರು. ಅದರಲ್ಲೂ ಅವರು ಹಾಡಿದ ಶ್ರೀಕಂಠಶಾಸ್ತ್ರಿಗಳು ಬರೆದ ಜೋಗುಳದ ಹಾಡು 'ಬಾ ಬಾ ಬನಸಿರಿಯೆ' ಬಹಳ ಜನಪ್ರಿಯವಾಯಿತು. ಇದಾದ ನಂತರ 1952ರಲ್ಲಿ ತೆರೆ ಕಂಡ ಶಂಕರ್ ಸಿಂಗ್ ಅವರ ಮಹಾತ್ಮ ಪಿಕ್ಚರ್ಸ್‌ನ 'ಶ್ರೀ ಶ್ರೀನಿವಾಸ ಕಲ್ಯಾಣ' ಚಿತ್ರದಲ್ಲಿ ಬಕುಳಾದೇವಿ ಪಾತ್ರವನ್ನು ಅಮೀರ್‌ಬಾಯಿ ನಿರ್ವಹಿಸಿದರು. ಅವರಿಗೆ ಈ ಚಿತ್ರದಲ್ಲಿ ನಾಲ್ಕು ಗೀತೆಗಳಿದ್ದವು. ಆ ಪೈಕಿ 'ಶ್ರೀಹರಿ ನಿನ್ನ ಮಹಾಮಹಿಮೆ' ಎಂಬ ಭಕ್ತಿಪ್ರಧಾನಗೀತೆ ಬಹಳ ಜನಪ್ರಿಯವಾಯಿತು. ಈ ಚಿತ್ರಕ್ಕೆ ಸಂಬಂಧಿಸಿದಂತೆ ಒಂದು ಕುತೂಹಲಕರ ಸಂಗತಿ ಇದೆ. ಈ ಚಿತ್ರಕ್ಕೆ ಸಂಗೀತ ನೀಡಿದವರು ಪಿ.ಶಾಮಣ್ಣ, ಅವರ ನೈಪುಣ್ಯ ಮೆಚ್ಚಿದ ಅಮೀರ್‌ಬಾಯಿ "ಹಿಂದಿ ಚಿತ್ರರಂಗದಲ್ಲಿ ಕನ್ನಡಿಗರು ಬೆಳಗಬೇಕು. ನಿಮಗೆ ಸಾಮರ್ಥ್ಯವಿದೆ ಅಲ್ಲಿಗೆ ಬಂದು ಬಿಡಿ ಅವಕಾಶಗಳನ್ನು ಕೊಡಿಸುತ್ತೇನೆ" ಎಂದು ಬಹುವಾಗಿ ಒತ್ತಾಯಿಸಿದರು. ವೃದ್ಧ ತಂದೆಯವರನ್ನು ಬಿಟ್ಟು ಬರಲು ಸಿದ್ಧರಿಲ್ಲದ ಶಾಮಣ್ಣ ಈ ಅವಕಾಶವನ್ನು ಒಪ್ಪಿಕೊಳ್ಳಲಿಲ್ಲ.

ಕರ್ನಾಟಕ ಆರ್ಟ್ಸ್ ಪ್ರೊಡಕ್ಷನ್‌ನವರು 1954ರಲ್ಲಿ ನಿರ್ಮಿಸಿದ 'ಆಶಾನಿರಾಶ' ಚಿತ್ರದಲ್ಲಿ ಅಮೀರ್‌ಬಾಯಿ ಮುಖ್ಯ ಪಾತ್ರ ವಹಿಸಿದ್ದಲ್ಲದೆ 'ದೇವ ಮುರಳಿಲೋಲ' 'ಜೀವದಾಸೆ ಮಾಯವಾಯ್ತು' 'ಒಲಿದಿರೆ ಮನ ಹಾಯ್' ಈ ಮೂರು ಗೀತೆಗಳನ್ನು ಹಾಡಿದರು. ವಿಶೇಷವೆಂದರೆ ಈ ಚಿತ್ರದಲ್ಲಿ ಮಹಮದ್ ರಫಿ ಮತ್ತು ಲತಾಮಂಗೇಶ್ಕರ್ ಕೂಡ ಹಾಡಿದ್ದರು. ಬುಲೋ–ಸಿ–ರಾಸಿ ಸಂಗೀತ ನಿರ್ದೇಶನದ ಎಸ್.ಕೆ.ಇಂದ್ರಾ ದಿಗ್ದರ್ಶನದ ಈ ಚಿತ್ರ ತೆರೆ ಕಾಣಲಿಲ್ಲ. ಇಲ್ಲಿಂದ ಮುಂದೆ ಅಮೀರ್‌ಬಾಯಿಯವರಿಗೆ ಕನ್ನಡ ಚಿತ್ರರಂಗದ ಒಡನಾಟ ಬರಲಿಲ್ಲ. ಆದರೆ ಅವರಿಗೆ ಕರ್ನಾಟಕದ ಬಗ್ಗೆ ಅಪಾರವಾದ ಅಭಿಮಾನವಿತ್ತು. 1958ರಲ್ಲಿ ಬಿಜಾಪುರದಲ್ಲಿ ಅಮೀರ್ ಚಿತ್ರಮಂದಿರ ಕಟ್ಟಿಸಿದ್ದರು. ಪ್ರತೀ ಮೊಹರಮ್ಮಿಗೂ ಬೀಳಗಿಗೆ ಬಂದು ಹಾಡುವ ಪದ್ಧತಿಯನ್ನು ಅವರು ಬಹಳ ಕಾಲ ಇಟ್ಟುಕೊಂಡಿದ್ದರು. ಅವರು ಹಲವಾರು ಕನ್ನಡ ಗೀತೆಗಳನ್ನು ಹಾಡಿದ್ದಾರೆ. 'ಇನ್ನು ಯಾಕೆ ಬರಲಿಲ್ಲ ಹುಬ್ಬಳಿಯ್ಯಾವ' 'ಜಾತ್ರಿಗೆ ಹೋಗೋಣ ಬಾ' 'ಬಿದ್ದೀಯಬ್ಬೇ ಮುದುಕಿ' 'ವಾರಿ ನೋಟ ಮರುಳು ಮಾಡಿದರ' ಮುಂತಾದ ಗೀತೆಗಳು ಆಕಾಶವಾಣಿ ಮೂಲಕವೇ ಕೇಳಿ ಬಂದು ಪ್ರಸಿದ್ಧವಾಗಿವೆ.

ಹಠಾತ್ ಮುಗಿದ ಅಧ್ಯಾಯ

ಅನಾರೋಗ್ಯ ಅಮೀರ್‌ಬಾಯಿಯವರ ಕೊನೆ ದಿನಗಳನ್ನು ಆತಂಕಕಾರಿಯಾಗಿಸಿತು. 3–4 ವರ್ಷ ದೈಹಿಕ ಸಮಸ್ಯೆಗಳಿಂದ ನರಳಿದವರನ್ನು ಪಾರ್ಶ್ವವಾಯು ಬಡಿಯಿತು. ನಾಲ್ಕು ದಿನ ನೋವುಂಡ ಅವರು 1965ರ ಮಾರ್ಚ್ 7ರಂದು ನಿಧನರಾದರು. ಅವರ ಕೊನೆಯ ಆಸೆಯಂತೆ ಬಿಜಾಪುರದಲ್ಲೇ ಅವರ ದೇಹವನ್ನು ಮಣ್ಣು ಮಾಡಲಾಯಿತು.

ದೇಶಾದ್ಯಂತ ಹೆಸರು ಮಾಡಿದ ಅಮೀರ್‌ಬಾಯಿ ಕನ್ನಡತಿ ಎಂಬುದು ನಮಗೆಲ್ಲಾ ಹೆಮ್ಮೆಯ ವಿಚಾರ. ಈ ಕಾರಣದಿಂದಲಾದರೂ ಅವರ ಬಗ್ಗೆ ಇನ್ನಷ್ಟು ಸಂಶೋಧನೆಗಳು ನಡೆಯಬೇಕಿದೆ.

ಆಧಾರ

1. ಹಿರಿಯ ನಿರ್ದೇಶಕರ ಹಿನ್ನೋಟ – ಎಂ.ಆರ್.ವಿಠಲ್
2. ಕನ್ನಡದಲ್ಲಿ ಅಮೀರ್‌ಬಾಯಿ – ಚಿತ್ರ ಸಮಾಚಾರ್ 1947
3. ಕನ್ನಡ ಚಲನಚಿತ್ರ ಇತಿಹಾಸ– ಸಂ. ಡಾ.ವಿಜಯಾ, ವಿ.ಎನ್.ಸುಬ್ಬರಾವ್, ಎಂ.ಬಿ.ಸಿಂಗ್ ಭಾಗ 1 ಮತ್ತು 2
4. ಸುಹಾನ್ ಗೀತ್.ಕಾಂ ನಲ್ಲಿ ಅಮೀರ್‌ಬಾಯಿ ಜೀವನ ಚಿತ್ರಣ
5. ಮರೆವಿಗೆ ಸಂದ ಕಲಾವಿದೆ ಅಮೀರ್‌ಬಾಯಿ ಕರ್ನಾಟಕಿ – ಡಾ.ರಹಮತ್ ತರೀಕೆರೆ (ಸುಧಾ ಯುಗಾದಿ ವಿಶೇಷಾಂಕ 2009)

❑





ಮಹಿಳಾ ವಿಮರ್ಶೆ ಮತ್ತು ಸಂಶೋಧನೆ

● *ಡಾ. ಪ್ರೀತಿ ಶುಭಚಂದ್ರ*


(ಹಿಂದಿನ ಸಂಚಿಕೆಯಿಂದ)

ವಾಸ್ತವವಾದಿ ಕಾದಂಬರಿ ಪ್ರಕಾರವನ್ನು ತಿರುಮಲಾಂಬಾ, ಕಲ್ಯಾಣಮ್ಮನವರು ಆಯ್ಕೆ ಮಾಡಿಕೊಳ್ಳುವಲ್ಲಿಯೇ ಒಂದು ರೀತಿಯ ವಿಮರ್ಶಾತ್ಮಕತೆ ಇದೆ. ಪುರುಷರು ಮಹಿಳಾ ಬರಹಕ್ಕೆ ನೀಡಿದ ಪ್ರೋತ್ಸಾಹದ ಹಿಂದಿನ ಆತಂಕಗಳ ಅರಿವನ್ನು ಹಿನ್ನೆಲೆಗೆ ಇಟ್ಟುಕೊಂಡು ಸ್ತ್ರೀಸುಧಾರಣಾ ಆಶಯಗಳಿಗೆ ದನಿಯಾಗಲು ಇವರ ಕೃತಿಗಳು ಯತ್ನಿಸಿದವು. ಆ ಮೂಲಕ ತಮ್ಮ ಕೃತಿಗಳು ಸ್ತ್ರೀ ಶಿಕ್ಷಣ, ಸಾಹಿತ್ಯಕ ಅಭಿವ್ಯಕ್ತಿಗಳ ಸಮರ್ಥನೆಯ ಹಿಂದಿನ ಪುರುಷರಾಜಕಾರಣದ ಅಧಿಕೃತ ದಾಖಲೆಯಾಗುವಂತೆ ಈ ಆದ್ಯಲೇಖಕಿಯರು ನೋಡಿಕೊಂಡರು. ತಿರುಮಲಾಂಬರ ಮೊದಲ ಪ್ರಕಟಿತ ಕಾದಂಬರಿ 'ಸುಶೀಲೆ'ಯನ್ನು ವಾಚಕ ವೃಂದ ಆದರಾಭಿಮಾನಗಳಿಂದ ಸ್ವಾಗತಿಸಿತು. ಸ್ತ್ರೀವಿದ್ಯಾಭ್ಯಾಸದ ಇಚ್ಛಿತ ಫಲದ ಪರಿಪಕ್ವ ಸ್ಥಿತಿಯಾಗಿ ಮಹಿಳಾ ಸಾಹಿತ್ಯ ಅಂದು ಮಾನ್ಯತೆ ಪಡೆಯಿತು. ಸುಶಿಕ್ಷಿತ ಸ್ತ್ರೀಯಾಗಿದ್ದೂ ಸನಾತನ ಸಂಸ್ಕೃತಿಯ ಮಾದರಿಯಾದ ನಾಯಕಿ ಪಾತ್ರಗಳನ್ನು ವಾಚಕವೃಂದ ಅಭಿಮಾನ ಪೂರ್ವಕವಾಗಿಯೇ ಸ್ವಾಗತಿಸಿತು.

ಸಂಕಥನ ವಿಶ್ಲೇಷಣೆಗೆ ಸಂಬಂಧಿಸಿದಂತೆ ಫುಕೋ ಒಂದು ರೂಪಕವನ್ನು ಬಳಸುತ್ತಾನೆ. ಸ್ವಾಭಿವ್ಯಕ್ತಿಯ ಕಥನಗಳು ಸಾಂಪ್ರದಾಯಿಕ ಆಶಯಗಳನ್ನು ನಿರೂಪಿಸುತ್ತಲೇ ಏಕಕಾಲಕ್ಕೆ ಬಂಡುಕೋರ ಪ್ರವೃತ್ತಿಗಳ ಬಗ್ಗೆ ಪಶ್ಚಾತ್ತಾಪರೂಪಿ ನಿವೇದನೆಯೂ ಆಗಿರಬೇಕೆಂಬುದು ಅಧಿಕಾರ ಶಕ್ತಿಗಳ ಒತ್ತಾಯವಾಗಿರುತ್ತದೆ. ಇದಕ್ಕೆ ನಿದರ್ಶನವೆಂಬಂತೆ ತಿರುಮಲಾಂಬಾರ 'ನಭಾ' ಕಾದಂಬರಿಯ ವಿನ್ಯಾಸವಿದೆ. ಪಾಶ್ಚಾತ್ಯ ಶಿಕ್ಷಣದ ವಿಚಾರಗಳು ದೇಶಸೇವೆಯನ್ನು ಪ್ರೇರಿಸುವಂತಾಗಬೇಕೇ ಹೊರತು ಮರುವಿವಾಹಕ್ಕೆ ಆಸ್ಪದವೀಯಕೂಡದೆಂಬ ಧೋರಣೆಗನುಗುಣವಾಗಿ 'ನಭಾ' ಪಾತ್ರ ಸಿದ್ಧಗೊಂಡಿದೆ. ಕೆಲವೊಮ್ಮೆ ಸೇವಾ ಆದರ್ಶವುಳ್ಳ ಪಾತ್ರದೆದುರು ಪ್ರತಿಪಾತ್ರಗಳು ಬರುವುದುಂಟು. ಆದರೆ ತಿರುಮಲಾಂಬರ ಬರವಣಿಗೆ ವ್ಯವಸ್ಥೆ ಅಪೇಕ್ಷಿಸುವ ಪಶ್ಚಾತ್ತಾಪರೂಪಿ ಬರವಣಿಗೆಯಲ್ಲ. ಸೇವಾ ಆದರ್ಶವನ್ನು ಚಲಾವಣೆಗೆ ತರುವಲ್ಲಿ ಮಹಿಳೆ ಎದುರಿಸಬೇಕಾದ ಸಂಘರ್ಷ, ಕ್ರೌರ್ಯಗಳ ವಿವರಗಳು ಮರುಮದುವೆ ಕೂಡದೆನ್ನುವ ಲೇಖಕಿಯ ಘೋಷಿತ ನಿಲುವು, ತರ್ಕವನ್ನು ಒಡೆದು ಹಾಕುತ್ತವೆ. ಪಶ್ಚಾತ್ತಾಪದ ಬದಲು ವಿದ್ರೋಹಾತ್ಮಕತೆಯನ್ನು ಸಾಧಿಸುತ್ತವೆ. ಫುಕೋ ಇಂತಹ ಇಕ್ಕಟ್ಟಿನ ಅಭಿವ್ಯಕ್ತಿಯನ್ನು ಎತ್ತರದ ಕಾವಲು ಗೋಪುರದ ಪ್ರಖರ ಬೆಳಕಿನಡಿಯ ವೃತ್ತಾಕಾರದ ಬಂದಿಖಾನೆಗೆ ಹೋಲಿಸುತ್ತಾನೆ. ಎತ್ತರದ ಕಾವಲು ಗೋಪುರ ವ್ಯವಸ್ಥೆಯ ಅಧಿಕಾರ ಶಕ್ತಿಗಳ ಸಂಕೇತ. ಬಂಧಿತರಿಗೆ ತಮ್ಮ ಚಲನವಲನಗಳೆಲ್ಲವೂ ಎಡೆಬಿಡದೆ ಸಮಗ್ರವಾಗಿ ಗಮನಿಸಲ್ಪಡುತ್ತವೆ ಎಂಬುದೇ ಗೊತ್ತಾಗದಂತೆ ಈ ವ್ಯವಸ್ಥೆಯಿದೆ. ಇಷ್ಟಾಗಿ 'ಮಾತೃನಂದಿನಿ' ಕಾದಂಬರಿಯ ನಂದಿನಿ ಎಚ್ಚೆತ್ತ ಮಹಿಳಾಪ್ರಜ್ಞೆಯ ಸಂಕೇತ. ಸನಾತನ ಮಾದರಿಯೊಳಗೆ ಸಮರ್ಥನೆ ಪಡೆವ ಸ್ತ್ರೀಶೋಷಣೆಯನ್ನು ಇಂಥ ಪಾತ್ರಗಳು ಪ್ರಶ್ನಿಸಿ ವಿರೋಧಿಸುತ್ತವೆ. 'ನಂದಿನಿ ಜಯಲಾಭ'ವೆಂಬ ಇಡೀ ಅಧ್ಯಾಯವು ಸನಾತನಿಗಳೊಂದಿಗೆ ನಂದಿನಿ ವಾದ ಹೂಡಿ ಗೆಲ್ಲುವುದನ್ನು ನಿರೂಪಿಸುತ್ತದೆ. ಹದಿನಾರು ವರ್ಷ ಮೀರಿದರೂ ಮದುವೆಯಾಗದೆ ಉಳಿದದ್ದಕ್ಕೆ ಊಟಕ್ಕೆ ಬಂದ ಸನಾತನಿಗಳಿಂದ ಆಕೆ ಕಟುಟೀಕೆಗೆ ಒಳಗಾಗುತ್ತಾಳೆ. ಹೆಣ್ಣುಮಕ್ಕಳನ್ನು ಕಾಡುಮೃಗದಂತೆ ಕಂಡು ಕ್ರೂರವಾಗಿ ದಂಡಿಸುವ ಸಾಂಪ್ರದಾಯಿಕ ಸಮಾಜವನ್ನು ನಂದಿನಿ ಕಟುಟೀಕೆಗೊಳಪಡಿಸುತ್ತಾಳೆ. ಈ ರೀತಿ ಗಂಡಸರ ಕೂಡ ವಾದಮಾಡಿ ಗೆಲ್ಲುವ ನಂದಿನಿಯ ಚಿತ್ರಣ ಮಾಸ್ತಿಯವರ ಟೀಕೆಗೆ ಗುರಿಯಾಯ್ತು. ಗಂಡಸರ ಕ್ರೌರ್ಯದೊಂದಿಗೆ ಸ್ತ್ರೀ ಸಮಾಜದ ಕುಂದುಕೊರತೆಗಳನ್ನು ಹೇಳಲೂ ಹಿಂದೆಗೆಯದ ನಂದಿನಿಯ ಸ್ವವಿಮರ್ಶಾ ಪ್ರಜ್ಞೆಯನ್ನು ಮಾಸ್ತಿ ಗಮನಿಸುವುದಿಲ್ಲ. ಹಾಗೆಯೇ 'ವಾಗ್ಭೂಷಣ' ಪತ್ರಿಕೆಯ ಸಂಪಾದಕರಿಂದ ಆಕ್ಷೇಪಣೆಗೆ ಒಳಗಾದ ಭಾಗವು ಕುಟುಂಬ ಬಹಿಷ್ಕಾರ ಹಾಕುವ ಉದ್ದೇಶದಿಂದ ಕೂಡಿದ ಮಠಾಧಿಪತಿಗಳ ಸಭೆಯ ವಿವರಗಳನ್ನು ಒಳಗೊಂಡಿದೆ. ಮಠದಂತಹ ಪ್ರಬಲ ಸಂಸ್ಥೆಗಳನ್ನು ವಿರೋಧಿಸಿದುದಕ್ಕಾಗಿ ಓದುಗರು ಆಗ್ರಹಗೊಳ್ಳುವರೇನೋ ಎಂಬ ನಿರೀಕ್ಷೆ ಹೊತ್ತುಕೊಂಡೇ ಸಮಕಾಲೀನ ವಾಸ್ತವಿಕತೆಗೆ ಕನ್ನಡಿ ಹಿಡಿಯುವುದು ತಮ್ಮ ಧ್ಯೇಯವೆಂಬುದನ್ನು ತಿರುಮಲಾಂಬಾ ಸ್ಪಷ್ಟಪಡಿಸುತ್ತಾರೆ. 'ಸುಶೀಲ' ಕಾದಂಬರಿಯ ನಾಯಕಿ ಪುಸ್ತಕ ಓದುತ್ತಾಳೆಂಬುದು ಅತ್ತೆಯ ಟೀಕೆಗೊಳಗಾಗುವ ಸಂದರ್ಭದ ವಾಸ್ತವತೆಯನ್ನು ತಿರುಮಲಾಂಬಾ ನಿರೂಪಿಸುತ್ತಾರೆ. ವಿದ್ಯಾವಂತ ಮಹಿಳೆಯ ಬಗೆಗಿನ ಪುರುಷ ಮನಸ್ಸಿನ 'ಭಯ' ತಿರುಮಲಾಂಬಾರ ರಚನೆಯನ್ನು ನಿಯಂತ್ರಿಸಿದ್ದು, 'ಒಂದು ಹೆಜ್ಜೆ ಮುಂದೆ ಹೋದಂತೆ ಕಂಡರೂ ಒಂದು ಹೆಜ್ಜೆ ಹಿಂದೆ ಉಳಿದಂತೆ' ಬಿ.ಎನ್. ಸುಮಿತ್ರಾಬಾಯಿಯವರಿಗೆ ಕಂಡಿದೆ. ಸ್ತ್ರೀ ವಿದ್ಯಾಭ್ಯಾಸವನ್ನು ಕುರಿತ ನಿರ್ದೇಶಕ ಗ್ರಂಥಗಳು ಪಾಶ್ಚಾತ್ಯ ಶಿಕ್ಷಣದ ಬಗ್ಗೆ ಆತಂಕ ಹಾಗೂ ಅಂಗೀಕಾರ ಎರಡನ್ನೂ ಹೊಂದಿದ್ದವು. ಸಾಂಪ್ರದಾಯಿಕ ಶಿಕ್ಷಣಕ್ಕಿಂತ ವಿಜ್ಞಾನ ವಿಷಯಗಳುಳ್ಳ ಲೌಕಿಕ ಶಿಕ್ಷಣದ ಬೇಡಿಕೆಯನ್ನು ದೇಶೀಯರೇ ಮುಂದಿಟ್ಟಿದ್ದರು. ಪಾಶ್ಚಾತ್ಯದೇಶಗಳ ಸಾಮಾಜಿಕ ಸಂದರ್ಭದ ಅವಶ್ಯಕತೆಯಾಗಿ ಸ್ತ್ರೀಶಿಕ್ಷಣವಿದ್ದು; ತಮ್ಮ ದೇಶದ ಮಹಿಳೆಯರಿಗೆ ಅಂಥದ್ದು ಅಗತ್ಯವಿಲ್ಲ ಎಂಬ ಧೋರಣೆ ಇಂತಿದೆ:

"....ಇಂಗ್ಲೆಂಡಿನಲ್ಲೂ ಅಮೆರಿಕಾದಲ್ಲೂ ಸ್ತ್ರೀಯರಿಗೆ ಪ್ರೌಢವಿದ್ಯಾಭ್ಯಾಸ ಮಾಡಿಸುವುದರ ಉದ್ದೇಶವೇನೆಂದರೆ – ಆ ದೇಶಗಳಲ್ಲಿ ಸ್ತ್ರೀಯರು ಪುರುಷರೊಡನೆ ಸ್ಪರ್ಧೆಯಿಂದ ಹೋರಾಡಿ ಪೈಪೋಟಿಯಾಗಿ ನಾನಾ ವಿಧವಾದ ವೃತ್ತಿಗಳಲ್ಲೂ ಸರ್ಕಾರದ ಉದ್ಯೋಗಗಳಲ್ಲೂ ಸೇರಿ, ಜೀವಿಕೆಗಳನ್ನು ಸಂಪಾದಿಸಿಕೊಳ್ಳುವುದಕ್ಕೆ ಬೇಕಾಗುವ ಸಾಮರ್ಥ್ಯವನ್ನು ಪಡೆಯುವಂತೆ ಮಾಡುವುದೇ ಅಲ್ಲಿಯ ವಿದ್ಯಾಭ್ಯಾಸದ ಮುಖ್ಯೋದ್ದೇಶ. ಆ ದೇಶದ ಪ್ರಕೃತ ಸ್ಥಿತಿಯಲ್ಲಿ, ಅಲ್ಲಿಯ ಕುಲಾಂಗನೆಯರೂ ಕೂಡ ಜೀವಿಕೆಯನ್ನು ಸಂಪಾದಿಸಿಕೊಳ್ಳುವುದಕ್ಕಾಗಿ ಮನೆಯನ್ನು ಬಿಟ್ಟು ಹೊರಗೆ ಹೋಗಲೇಬೇಕಾಗಿದೆ. ಇದಕ್ಕೆ ಅನೇಕ ಕಾರಣಗಳುಂಟು. ಅಲ್ಲಿನ ಪ್ರಾಯಸಮರ್ಥರಾದ ಪುರುಷರನೇಕರು ಇತರ ದೇಶಗಳಿಗೆ ಹೋಗಿ ಹೊಸದಾಗಿ ಊರುಗಳನ್ನು ಕಟ್ಟಿಕೊಂಡು ಅಲ್ಲೇ ನಿಂತುಬಿಡುವುದರಿಂದಲೂ ವಿಧವಾ ವಿವಾಹವು

ಪ್ರಚುರವಾಗಿ ಒಬ್ಬ ಹೆಂಗಸು ಒಬ್ಬನ ಬಳಿಕ ಒಬ್ಬನ ಮೇಲೆ ಇಬ್ಬರು ಮೂವರು ಪತಿಗಳನ್ನು ವರಿಸ ಬಹುದಾದ್ದರಿಂದಲೂ, ಪುರುಷರ ಮರಣ ಸಂಖ್ಯೆಯು ಹೆಚ್ಚಾಗಿರುವುದರಿಂದಲೂ ಇನ್ನೂ ಇತರ ಕಾರಣಗಳಿಂದಲೂ ಆ ದೇಶಗಳಲ್ಲಿ ವರನಿಲ್ಲದೆ ಅನೇಕ ಸ್ತ್ರೀಯರು ಮದುವೆಯಿಲ್ಲದೆ ನಿಂತಿದ್ದಾರೆ. ಅಲ್ಲಿ ಒಬ್ಬ ಗಂಡಸು ಮದುವೆಯಾದರೆ ತಂದೆ-ತಾಯಿಗಳ ಮನೆಯನ್ನು ಬಿಟ್ಟು ತಾನೂ ತನ್ನ ಹೆಂಡತಿಯೂ ವಾಸ ಮಾಡುವುದಕ್ಕೆ ಬೇರೆ ಮನೆ ಮಾಡಿಕೊಳ್ಳುತ್ತಾರೆ. ಆದ್ದರಿಂದಲೇ ಮದುವೆ ಯಿಲ್ಲದ ಹೆಣ್ಣುಮಕ್ಕಳು ತಮ್ಮ ತಾಯಿ-ತಂದೆಯರು ಮೃತರಾದ ಬಳಿಕ ಜೀವನ ಸಂಪಾದನೆಗಾಗಿ ಹೊರಗೆ ಹೋಗಬೇಕಾಗುತ್ತದೆ. ಇಂಥ ಸಂದರ್ಭ ಗಳಲ್ಲಿ ಇವರು ವಿದ್ವಾಂತರಾದ ಪುರುಷರಿಗೆ ಸಮನಾಗಿ ಸ್ಪರ್ಧಿಸುವುದು ಆವಶ್ಯಕವಾದ್ದರಿಂದ ಇದುವರೆಗೂ ಪುರುಷರಿಗಾಗಿಯೇ ಕ್ಲುಪ್ತವಾಗಿದ್ದ ವಿದ್ಯೆಗಳನ್ನೇ ಅವರೂ ಕಲಿಯಬೇಕಾಗಿದೆ. ಹಾಗೆ ಮಾಡದಿದ್ದರೆ ಈ ಹೋರಾಟದಲ್ಲಿ ಅವರಿಗೆ ಸಹಾಯ ಸಂಪತ್ತು ಕಡಿಮೆಯಾಗಿ ಅವರು ಮಿತ ವಾದ ಆದಾಯಗಳಲ್ಲೇ ಕ್ಲೇಶಪಡಬೇಕಾಗುವುದು. ಆದ್ದರಿಂದ ಆ ದೇಶದ ಪಾಠಶಾಲೆಗಳಲ್ಲಿಯೂ ಮಹಾಪಾಠಶಾಲೆಗಳಲ್ಲಿಯೂ ಪುರುಷರಿಗೆ ಕಲಿಸುವ ವಿದ್ಯೆಗಳನ್ನೇ ಸ್ತ್ರೀಯರಿಗೂ ಕಲಿಸುತ್ತಾರೆ. ಸ್ತ್ರೀಯರು ತಾವು ಮುಂದೆ ಜೀವಿಕೆಗಳನ್ನು ಸಂಪಾದಿಸುವಲ್ಲಿ ಪುರುಷರೊಡನೆ ಹೇಗೆ ಹೋರಾಡುವರೋ ಹಾಗೆಯೇ ಈಗ ಪರೀಕ್ಷೆಗಳಲ್ಲಿ ಹೋರಾಡುತ್ತಾರೆ" *(ಪು. 10-11. The education of Hindu Youth, ಎಂಬ ಶೀರ್ಷಿಕೆಯ ಹಾಳೆ ಲುಪ್ತ ವಾಗಿರುವ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಗ್ರಂಥ ಭಂಡಾರದಲ್ಲಿರುವ ಕಿರುಹೊತ್ತಿಗೆ, ಸಂಖ್ಯೆ K574, ಕರ್ತೃ ವಿವರ ಲಭ್ಯವಿಲ್ಲ.)*



ತಿರುಮಲಾಂಬಾ

ಅವಿಭಕ್ತ ಕುಟುಂಬದೊಳಗೆ ರಕ್ಷಿತರಾದ ಆರ್ಯಕುಲಾಂಗನೆಯರಿಗೆ ಗೃಹಕೃತ್ಯಗಳನ್ನು ಸರಿಯಾಗಿ ನಿರ್ವಹಿಸುವ ಸಾಮರ್ಥ್ಯವನ್ನು ಉಂಟುಮಾಡುವ ವಿದ್ಯೆಗಳನ್ನು ಕಲಿಸಬೇಕೆಂಬುದು ಗ್ರಂಥಕರ್ತರ ಅಭಿಮತ. ಆರ್ಯಬಾಲೆಯರು ಪಾಠಶಾಲೆಗಳಲ್ಲಿ ಓದುವ ಕಾಲ ಸ್ವಲ್ಪವಾದ್ದರಿಂದ ಜಾಗತಿಕ ಭಾಷೆ, ಚರಿತ್ರೆಗಳ ವಿಷಯಕ್ಕಿಂತ ನಮ್ಮ ದೇಶದ ಚರಿತ್ರೆ, ಮಹಾಕಾವ್ಯ, ಪುರಾಣ, ಧರ್ಮಗಳ ವಿಷಯ ಕಲಿಸುವುದು ಸೂಕ್ತವಂತೆ. ವಿಶೇಷವಾಗಿ ಭಕ್ತಿನಿಷ್ಠೆಯನ್ನು ನೆಲೆಗೊಳಿಸುವ ಸ್ತೋತ್ರ, ಧ್ಯಾನ, ಶ್ಲೋಕಗಳನ್ನು ಅದರಲ್ಲಿಯೂ ಭಗವದ್ಗೀತೆಯ ತಿಳಿವಳಿಕೆ ಆರ್ಯಮಹಿಳೆಗೆ ಅತ್ಯಗತ್ಯ. ಆರ್ಯಸ್ತ್ರೀ ಶಿಕ್ಷಣದ ಆದರ್ಶ ಹೀಗಿದೆ:

"ಆರ್ಯರ ಇತಿಹಾಸಗಳಲ್ಲಿ ದೊರಕುವ ಮಹನೀಯರಾದ ಆರ್ಯಸ್ತ್ರೀಯರ ಹೆಸರುಗಳೂ, ತಮ್ಮ ಶೀಲವನ್ನು ಅನುವರ್ತಿಸುವಂತೆ ಜನರನ್ನು ಪ್ರೇರಿಸುವ ಅವರ ಧರ್ಮನಿಷ್ಠೆಯೂ, ಚಿತ್ತೌದಾರ್ಯಕ್ಕೆ ಹೇತುವಾದ ಅವರ ಪ್ರಭಾವವೂ ಚೆನ್ನಾಗಿ ಪರಿಚಿತವಾಗಿರಬೇಕು. ಆರ್ಯಸ್ತ್ರೀಯರಲ್ಲಿ ಉತ್ತಮರು ಇರಬೇಕಾದ ಕ್ರಮವನ್ನು ಈ ಮಹಾತ್ಮರಾದ ಸ್ತ್ರೀಯರ ಚರಿತ್ರೆಯ ಮೂಲಕವಾಗಿ ಮೂರ್ತೀಭವಿಸಿ ಪ್ರತ್ಯಕ್ಷವಾಗುವಂತೆ ತಿಳಿಸಬೇಕು. ಅವರ ನಡತೆಯೇ ತಮ್ಮ ನಡತೆಗೆ ಮೇಲುಪಂಕ್ತಿಯೆಂದು ಕಲಿಸಿಕೊಡಬೇಕು. ಈ ರೀತಿಯಾದ ಹೃದಯಪರಿಪಾಕವೂ ಈ ರೀತಿಯಾಗಿ ಸತ್ಕಥಾ ಪರಿಪೂರ್ಣವಾದ ಬುದ್ಧಿಯೂ ಉಳ್ಳ ಸ್ತ್ರೀಯು "ಇಯಂ ಗೇಹೇ ಲಕ್ಷ್ಮೀ" ಎಂಬ ವಾಕ್ಯಾನುಸಾರವಾಗಿ ಮನೆಗೆ ಲಕ್ಷ್ಮಿಯಂತೆ ಇರುವಳು. ಅವಳ ಪತಿಯೂ ಪುತ್ರರೂ ಅವಳಲ್ಲಿ ನಿರಾತಂಕವಾಗಿ ವಿಶ್ವಾಸವಿಡುವರು. ಹೀಗೆ ಶಿಕ್ಷಿತರಾದ ಬಾಲೆಯರು ಆರ್ಯಗೃಹವನ್ನು ಅದಕ್ಕೆ ಯೋಗ್ಯವಾದ ಉಚ್ಚಸ್ಥಿತಿಗೆ ತರುವರು; ಅಂದರೆ ಆರ್ಯಗೃಹವನ್ನು ಆಧ್ಯಾತ್ಮಜ್ಞಾನಕ್ಕೆ ನೆಲೆಯಾಗಿಯೂ ಆರ್ಯಧರ್ಮಕ್ಕೆ ಅವಲಂಬಸ್ಥಾನವಾಗಿಯೂ ಮಾಡುವರು. ಅವರಲ್ಲಿ ಪ್ರಾಚೀನಾರ್ಯರ ಮಹಾಭಾಗ್ಯವೂ ಪುನಃ ಆವಿರ್ಭವಿಸುವುದು. ಅವರಲ್ಲಿ ಸೀತೆಯ ಕಾರುಣ್ಯವೂ, ಸಾವಿತ್ರಿಯ ಪಾತಿವ್ರತ್ಯವೂ, ಗಾರ್ಗಿಯ ಬುದ್ಧಿಕೌಶಲವೂ, ಮೈತ್ರೇಯಿಯ ಸರ್ವಸಂಗ ಪರಿತ್ಯಾಗ ಪುರಸ್ಸರವಾದ ಜ್ಞಾನಸಂಪತ್ತೂ ಆವಿರ್ಭವಿಸುವುದನ್ನು ನಾವು ಕಾಣಬಹುದು". *(ಪು. 14 The education of Hindu Youth).*

ಕೊಂಚ ದೀರ್ಘವೆನಿಸುವ ಈ ಉಲ್ಲೇಖವನ್ನು ಕೊಟ್ಟ ಉದ್ದೇಶ-ಕನ್ನಡದ ಆದ್ಯ ಕಥನಕಾರ್ತಿಯರ ವಿಮರ್ಶಾ ಪ್ರಜ್ಞೆಯ ಸೃಜನಶೀಲ ಒತ್ತಾಸೆಗಳನ್ನು ಸ್ಪಷ್ಟಪಡಿಸುವುದು. ಮಾಸ್ತಿಯವರು ತಿರುಮಲಾಂಬಾರ 'ಸುಶೀಲೆ' ಕಾದಂಬರಿಯ ಲೋಪದೋಷಗಳನ್ನು ವಿವರಿಸುತ್ತಾ ವಾಸ್ತವವಾಗಿ ಕಥನ ಕಲೆಯ ದೃಷ್ಟಿಯಿಂದ 'ಸುಶೀಲೆ' ನಿಜವಾದ ವ್ಯಕ್ತಿ ಎಂದು ನಮಗೆ ಭಾವನೆಯುಂಟಾಗುವುದಿಲ್ಲ ಎನ್ನುತ್ತಾರೆ. ಪಾತಿವ್ರತ್ಯ, ಸ್ತ್ರೀಶಿಕ್ಷಣದ ಪರವಾದ ಮಾತುಗಳನ್ನು ಲೆಕ್ಚರಿನ ರೂಪದಲ್ಲಿ ಪಾತ್ರಗಳಿಗೆ ಹಂಚಿಬಿಟ್ಟಾಗ ಕತೆಯೂ ಸಂಸಾರದ ನಿಜಚಿತ್ರವನ್ನು ನೀಡುವುದಿಲ್ಲವೆಂಬ ಆಕ್ಷೇಪ ಅವರದು. ಮಾಸ್ತಿಯವರ ಕಥನಕಲೆಯ ಮೀಮಾಂಸೆ 19ನೇ ಶತಮಾನದಲ್ಲಿ ಮೂಡಿಬಂದ ರೊಮ್ಯಾಂಟಿಕ್ ಆಶಯದ ವಾಸ್ತವತಾವಾದವನ್ನು ಆಧರಿಸಿದ್ದು. ಆದರೆ 18ನೇ ಶತಮಾನದ ವಾಸ್ತವತಾವಾದೀ ಕಥನಕಲೆಯ ಮಾದರಿ ತಿರುಮಲಾಂಬಾರವರದು. 18ನೇ ಶತಮಾನದ ಫ್ರೆಂಚ್‌ಭೌತವಾದ (French materialism) ದಿಂದ ಪ್ರೇರಿತವಾದ ರೂಸೋ ಶಿಕ್ಷಣವು ಮಾನವನನ್ನು ಬದಲಿಸಬಹುದೆಂಬ ನಂಬಿಕೆಯನ್ನು ಕಟ್ಟಿಕೊಂಡ. 18ನೇ ವಯಸ್ಸಿನವರೆಗೂ ನಿಸರ್ಗಾನುಸಾರಿ ಶಿಕ್ಷಣವನ್ನು ಕೊಟ್ಟು ನಂತರ ಆಧ್ಯಾತ್ಮಿಕ ವಿದ್ಯೆಯ ತರಬೇತಿಯನ್ನು ಎಮಿಲಿ ಎಂಬ ಕಾಲ್ಪನಿಕ ಹುಡುಗನಿಗೆ ನೀಡಬೇಕೆಂದು ರೂಸೋ ಪ್ರತಿಪಾದಿಸಿದ. ಆದರೆ ಎಮಿಲಿಗೆ ಜೊತೆಗಾತಿಯಾಗಲಿರುವ ಕಾಲ್ಪನಿಕ ಹುಡುಗಿ ಸೋಫಿಯಳಿಗೆ ಆತ್ಮವಿದ್ಯೆಯ ಬದಲಾಗಿ ಆದರ್ಶ ಮಾತೆ, ಗೃಹಿಣಿಯಾಗಿರುವ ತರಬೇತಿ ಕೊಟ್ಟರೆ ಸಾಕಂತೆ. ಉನ್ನತ ಮಟ್ಟದ ವಿಷಯಗಳನ್ನಾಗಲಿ ತತ್ತ್ವಜ್ಞಾನ, ವಿಜ್ಞಾನಗಳನ್ನು ಆಕೆ ಎಂದಿಗೂ ಅಭ್ಯಸಿಸಕೂಡದೆಂಬ ನಿಷೇಧ ಆತನದು. ಹೆಚ್ಚು ಶಿಕ್ಷಣ ಪಡೆದ ಹೆಣ್ಣು ತನ್ನ ಪತಿ, ಮಕ್ಕಳು, ಮನೆತನಕ್ಕೆ ಪೀಡೆ ಎಂದು ಆತ ಆತಂಕ ವ್ಯಕ್ತಪಡಿಸುತ್ತಾನೆ.

ಊಳಿಗಮಾನ್ಯಶಾಹಿಯಿಂದ ಬಂಡವಾಳಶಾಹಿತ್ವಕ್ಕೆ ಹೊರಳಿಕೊಳ್ಳುವ ಸಮಾಜದ ದ್ವಂದ್ವಗಳಿಗೆ ರೂಸೋನ ಬರಹ ಸಾಕ್ಷಿ. ಮಹಿಳೆಯರ ಕುರಿತಾದ ಈ ನಿರ್ಬಂಧಗಳು ಮಹಿಳಾ ಶಿಕ್ಷಣವು ಹೊಸ ಬಗೆಯ ಸ್ತ್ರೀ-ಪುರುಷ ಸಂಬಂಧವನ್ನು ಸ್ಥಾಪಿಸಿದ್ದುದರ ಸೂಚಕ. ಈ ಹೊಸ ಬಗೆಯ ಸಂಬಂಧದ ಬಗ್ಗೆ ರೂಸೋ ಆತಂಕಿತ. ಹೊಸ ರೀತಿಯ ಸಾಮಾಜಿಕ ಸಂಬಂಧದ ಮೂಲಕ ನಿರ್ಮಾಣಗೊಂಡ ಸ್ತ್ರೀ ಪುರುಷರ ನಾವೀನ್ಯವನ್ನು ಕಾದಂಬರಿ

ಪ್ರಕಾರವೆಂಬ ಸಾಧನದ ಮೂಲಕ ಲೇಖಕರು ಪರೀಕ್ಷಿಸಲೆತ್ನಿಸಿದರು. ತಮ್ಮ ಕಣ್ಣೆದುರಿನ ಬೂರ್ಜ್ವಾ ಸಮಾಜದ ಕ್ರೌರ್ಯ, ಅನ್ಯಾಯಗಳಿಗೆ ಇವರು ಕುರುಡರಾಗಲಿಲ್ಲ. ಈ ಸಾಮಾಜಿಕ ಜಗತ್ತಿನ ಮೇಲೆ ತನ್ನ ನಿಯಂತ್ರಣ ಸ್ಥಾಪಿಸಲು ಹೋರಾಡುವ ಇದೇ ಜಗತ್ತಿನ ಭಾಗವಾದ ಪುರುಷನ ಅಧಿಕೃತ ಚಿತ್ರಣವನ್ನು ಆ ಹೊತ್ತಿನ ಕಾದಂಬರಿಗಳು ನೀಡಿದವು. ತಿರುಮಲಾಂಬಾರ ಕೃತಿಗಳಲ್ಲಿ ಭಾಷಣಗಳು ಮಾಸ್ತಿಯವರಿಗೆ ಲೋಪವಾಗಿ ಕಾಣುತ್ತವೆ. Fieldingನಂಥ ಕಾದಂಬರಿಕಾರನ ಕೃತಿಗಳಲ್ಲಿಯೂ ಇಂಥ ಉಪದೇಶಾತ್ಮಕತೆ ಪ್ರಬಂಧದ ರೂಪದಲ್ಲಿ ಬರುತ್ತದೆ. ಶಿಷ್ಟ ಸಾಹಿತ್ಯ ವಲಯಗಳಲ್ಲಿನ ರಚನಾ ನಿಯಮಗಳ ಅರಿವಿಲ್ಲದ Fielding, ತಾ ಕಂಡಂತೆ ಬದುಕಿನ ಸತ್ಯಗಳನ್ನು ಹೇಳುವುದೇ ಕಾದಂಬರಿಕಾರರ ಉದ್ಯೋಗ ಎಂಬುದನ್ನರಿತ ಮೊದಲ ಇಂಗ್ಲಿಷ್ ಲೇಖಕ ಎಂಬ ಹೆಗ್ಗಳಿಕೆಗೆ ಪಾತ್ರನಾಗಿದ್ದಾನೆ. ಮಾನವನ ಹೃದಯದಾಳದ ಸಂವೇದನೆಗಳನ್ನು ಸೆರೆಹಿಡಿಯಬಲ್ಲ ಕಲ್ಪನಾಶೀಲತೆಯ ಎಲ್ಲ ಕ್ರೌರ್ಯಗಳೂ ತುತ್ತತುದಿ ತಲುಪಿದ್ದ ಕಾಲಮಾನ ಯುರೋಪಿನ ಸಂದರ್ಭವಾದರೆ, ಕನ್ನಡದ ಆದ್ಯ ಲೇಖಕಿಯರು ಬರವಣಿಗೆಗೆ ತೊಡಗಿದ್ದ ಸಂದರ್ಭವು ಬಂಡವಾಳಶಾಹಿ ಸಾಮ್ರಾಜ್ಯಶಾಹಿ ಹೇರಿದ ಪಾರತಂತ್ರ್ಯದ್ದು. ತನ್ನ ಮೇಲಾಗುತ್ತಿರುವ ಶೋಷಣೆಯ ಬಗೆಗೆ ತಾತ್ತ್ವಿಕ ಅರಿವನ್ನು ತುರ್ತಾಗಿ ಪಡೆವ ಅಗತ್ಯ ನಮ್ಮ ಲೇಖಕಿಯರಿಗಿತ್ತು. ಈ ಅರಿವನ್ನು ಮಹಿಳಾ ಲೋಕದೊಂದಿಗೆ ಹಂಚಿಕೊಳ್ಳುವ ಅನಿವಾರ್ಯತೆಯ ಫಲಿತವಾಗಿಯೇ ಸ್ತ್ರೀಪರ ವಿಚಾರಗಳು ಪಾತ್ರಗಳ ಮೂಲಕ ಭಾಷಣಗಳಾಗಿ ಮೂಡಿಬಂದವು. ಕಥನ ತಂತ್ರ, ಶೈಲಿಗಳ ಬಗ್ಗೆ ತಲೆಕೆಡಿಸಿಕೊಳ್ಳದೆ ಒಂದು ಬಗೆಯ ವಸ್ತುನಿಷ್ಠತೆಯನ್ನು ಅವರ ಕಥನ ಸಾಧಿಸಿತು. ಆದರೆ ಲೇಖಕಿಯರ ಇಡೀ ಸೃಜನ ಪ್ರಕ್ರಿಯೆಯು ರೊಮ್ಯಾಂಟಿಕ್ ಸಾಹಿತ್ಯ ಮೀಮಾಂಸೆಯ ಚೌಕಟ್ಟಿನಾಚೆ ತನ್ನನ್ನು ಸ್ಥಾಪಿಸಿಕೊಂಡಂಥ ಅತ್ಯಂತ ವ್ಯಕ್ತಿನಿಷ್ಠ ಪ್ರಯತ್ನವೇ ಆಗಿತ್ತು. ವ್ಯಕ್ತಿತ್ವದ ಅಭಿವ್ಯಕ್ತಿಯೇ ಕಾವ್ಯವೆಂತಲೂ ಅಂಥ ಕಾವ್ಯದ ಸಹೃದಯಾನುಭವದ ಅಭಿವ್ಯಕ್ತಿಯೇ ವಿಮರ್ಶೆ ಎಂತಲೂ ರೊಮ್ಯಾಂಟಿಕ್ ಸಾಹಿತ್ಯ ಧೋರಣೆಗಳಿವೆ. ಆದರೆ ಮೂಲಭೂತವಾಗಿ ಮಹಿಳೆಯಾಗಿ ತನ್ನ ವ್ಯಕ್ತಿತ್ವವನ್ನು ಕಂಡುಕೊಳ್ಳುವುದಕ್ಕೆ ಅಗತ್ಯವಾದ ಭೂಮಿಕೆಯನ್ನು ಸಿದ್ಧಪಡಿಸುವ ಮಾರ್ಗೋಪಾಯವಾಗಿ ಆದ್ಯ ಲೇಖಕಿಯರ ಬರಹಗಳು ಸಿದ್ಧಗೊಂಡವು. ಆದರೆ ಈ ಬರಹಗಳು ಎಷ್ಟರಮಟ್ಟಿಗೆ ನಿರ್ಬಂಧಕ್ಕೆ ಒಳಗಾಗಿದ್ದವೆಂಬುದನ್ನು ಸ್ತ್ರೀ ವಿದ್ಯಾಭ್ಯಾಸದ ಬಗೆಗಿನ ಸಂಕುಚಿತ ಧೋರಣೆ ತಿಳಿಸುತ್ತದೆ. 'ಮಧುರವಾಣಿ' ಪತ್ರಿಕೆಯ ಲೇಖನಸ್ಪರ್ಧೆಯಲ್ಲಿ ಬಹುಮಾನ ಪಡೆದ ತಾವು ಒಬ್ಬರೇ ಸ್ಪರ್ಧಿ ಎಂಬುದು ತಿರುಮಲಾಂಬಾರಿಗೆ ದುಃಖದ ಸಂಗತಿ. ಗ್ರಂಥಮಾಲೆಯ ಪ್ರಕಟಣೆ ಸಂದರ್ಭದ ಮನವಿಯಲ್ಲಿ ಅವರ ಉದ್ದೇಶ ಇಂತಿದೆ: "…. From only in 1911, I entered the field of literary works in Kannada; that was a time when the press and platform in Kannada were expressing their bitter disappointment, that not many Hindu Ladies contributed to the cause of Kannada literature, in fact there was a complaint that unlike in other state languages, there was not much of on encouragement to the literary, cultural and social betterment of the women of the Karnataka."

ಸ್ತ್ರೀವಿದ್ಯಾಭ್ಯಾಸದ ಬಗ್ಗೆ ಅಸಮ್ಮತಿ ಸೂಚಿಸುವ ಸಮಕಾಲೀನ ಸಂದರ್ಭದ 'ಅತ್ತೆ'ತನವನ್ನೂ ಅಂಥ ಟೀಕೆಗಳನ್ನು ಸ್ವತಃ ಎದುರಿಸಿರುವ ತನ್ನ 'ಸೊಸೆ'ತನವನ್ನೂ ಏಕಕಾಲದಲ್ಲಿ ತಿರುಮಲಾಂಬಾ ಕೃತಿಗಳಲ್ಲಿ ಹಿಡಿದಿಟ್ಟಿದ್ದಾರೆ. 'ಹಿತೈಷಿಣಿಯ ಹೆಜ್ಜೆಗಳು' ವಾಚಿಕೆಯನ್ನು ಸಿದ್ಧಮಾಡಿದ ವಿಜಯಾದಬ್ಬೆಯವರು 'ಅತ್ತೆ'ತನದ ಪ್ರತಿನಿಧಿಯಾಗಿ ನಿಂತ ಮಾಸ್ತಿಯವರ ಆರೋಪಮಿಶ್ರಿತ ವಿಮರ್ಶೆಯನ್ನು ವಿಮರ್ಶಿಸಿದ್ದಾರೆ. ದಶಕಗಳಲ್ಲಿ ಕರ್ನಾಟಕದ ಮಹಿಳೆಯರ ಇತಿಹಾಸದ ದಿಕ್ಕು ಬದಲಾಗುತ್ತಾ ಬಂದಿರುವುದರ ಹಿನ್ನೆಲೆಯಲ್ಲಿ ತಿರುಮಲಾಂಬಾರ ರಚನಾತ್ಮಕ ಧೋರಣೆಗಳು ಯಾವುದೋ ಪ್ರಮಾಣದಲ್ಲಿ ಪ್ರಭಾವ ಬೀರಿರುವುದಾಗಿ ವಿಜಯಾ ದಬ್ಬೆ ಹೇಳುತ್ತಾರೆ. ಸ್ತ್ರೀ ವಿದ್ಯಾಭ್ಯಾಸದ ಬಗ್ಗೆ ನಾನು ಉಲ್ಲೇಖಿಸಿದ ಪತ್ಯದೊಂದಿಗೆ ಸಹಮತವನ್ನು ಹೊಂದುವಂತಹ ನಿಲುವು ತಿರುಮಲಾಂಬಾರದು. ವಿಜಯಾ ದಬ್ಬೆ ಈ ದ್ವಂದ್ವವನ್ನು ಗುರುತಿಸುತ್ತಾರೆ. ಸ್ತ್ರೀಯರಲ್ಲಿ ಆಧುನಿಕ ಶಿಕ್ಷಣವು ನಿರಂಕುಶ ಪ್ರಭುತ್ವದ, ಸ್ವೈರವೃತ್ತಿಯ ವ್ಯಾವಹಾರಿಕ ಔದ್ಯೋಗಿಕ ವ್ಯಸನಗಳನ್ನು ಹೆಚ್ಚಿಸಿದರೆ, ಅವರಿಂದ ಪರಿಣಾಮಗೊಳ್ಳುವ ಪುರುಷರ ಬಗ್ಗೆ ತಿರುಮಲಾಂಬಾ ಆತಂಕಿತರು. ಪುರುಷರಿಗೆ, ಇಂಥ ಬೆಳವಣಿಗೆ ಸ್ತ್ರೈಣ*ರೆಂಬ ಅಪವಾದ ಕಲ್ಪಿಸಿದರೇನು ಗತಿ ಎಂಬ ಚಿಂತೆ ಅವರಿಗೆ. ಆದರೆ ನಾಡದೇವಿ, ರಾಷ್ಟ್ರದೇವಿ ಎಂಬ ಮಾತೃರೂಪಿ ಪ್ರತಿಮೆಯನ್ನು ಕಲ್ಪಿಸಿಕೊಂಡ ರಾಷ್ಟ್ರೀಯ ಹೋರಾಟಗಾರರಿಗೆ ಪಾರತಂತ್ರ್ಯವು 'ಸ್ತ್ರೀಗುಣ' ಸ್ಥಿತಿಯಾಗಿ ಪರಿಣಮಿಸಿತ್ತು. ಇದಕ್ಕೆ ಪ್ರತಿಯಾಗಿ ಕ್ಷಾತ್ರಗುಣಗಳುಳ್ಳ ವೀರಯೋಧ ಮಾದರಿಯನ್ನು ಪುರುಷತ್ವವಾಗಿ ಪರಿಭಾವಿಸಲಾಯ್ತು. ಇಂಥ ಪುರುಷತ್ವದ ಮಾದರಿಯೇ ಪ್ರಧಾನವಾಗಿದ್ದ ಸಂದರ್ಭದಲ್ಲಿ ಮಹಿಳಾ ಬರವಣಿಗೆ ದೊಡ್ಡ ಸವಾಲನ್ನೆದುರಿಸಿತು. ಇದರೊಂದಿಗೆ ಗಾಂಧೀವಾದವೂ ಮಹಿಳೆಯನ್ನು ನೈತಿಕ ಆಧ್ಯಾತ್ಮಿಕ ಸಾಮರ್ಥ್ಯದ ಸಂಕೇತವಾಗಿ ಪುರುಷ ಅಂತರ್ಗತಗೊಳಿಸಿಕೊಳ್ಳಬೇಕಾದ ಮಾದರಿಯಾಗಿ ಇಟ್ಟಿತ್ತು. ಆಧುನಿಕ ಸ್ತ್ರೀವಾದಕ್ಕೆ ಪ್ರಗತಿ ವಿರೋಧಿ ಎನಿಸುವಂಥ ಗಾಂಧಿವಾದವನ್ನು ನಮ್ಮ ಲೇಖಕಿಯರು ತಿರಸ್ಕರಿಸುವಂತೆಯೂ ಇರಲಿಲ್ಲ. ಪಾರತಂತ್ರ್ಯವನ್ನು ಸ್ತ್ರೀಯ ಮೇಲಿನ ಅತ್ಯಾಚಾರವೆಂದು ಪರಿಭಾವಿಸಿದ ಯೋಧ ಮಾದರಿಯ ರಾಷ್ಟ್ರೀಯತೆ ಸ್ತ್ರೀಗುಣಗಳ ಆದರ್ಶೀಕೃತ ಸ್ಥಿತಿಯನ್ನು ಶುದ್ಧತೆಯ ಸಂಕೇತವಾಗಿಟ್ಟುಕೊಂಡಿತು. ಜೊತೆಗೆ ಗಾಂಧೀವಾದವು ಕಲ್ಪಿಸಿಕೊಟ್ಟ ಸ್ತ್ರೀಗುಣಗಳ ಅಂತರ್ಗತೀಕರಣದ ಆದರ್ಶ ಬೇರೆ. ಇವೆರಡೂ ಸಮಕಾಲೀನ ಮಹಿಳಾ ಬಿಡುಗಡೆಯ ಪ್ರಯತ್ನವನ್ನು ಇನ್ನಿಲ್ಲದ ಆತಂಕದಿಂದ ಲೇಖಕರು ಸ್ವೀಕರಿಸುವಂತೆ ಮಾಡಿದವು. ಆತಂಕ ಹೆಚ್ಚಿದಷ್ಟೂ ನಿಯಂತ್ರಣದ ಅಪೇಕ್ಷೆ, ಮಾರ್ಗಗಳು ಹೆಚ್ಚಾದವು. ಇಂಥ ಸಂದರ್ಭದಲ್ಲಿ ಆಧುನಿಕ ಕನ್ನಡದ ಪುರುಷ ಸೃಜನಶೀಲತೆ ಮಹಿಳಾ ಶುದ್ಧತೆಯ ಕೇಂದ್ರದಿಂದಲೇ ತನ್ನನ್ನು ವಿವರಿಸಿಕೊಂಡಿತು. ಮಾಸ್ತಿಯವರ "ಮಸುಮತ್ತಿ" ಕಥೆ ರಾಷ್ಟ್ರ ರಾಜಕಾರಣ ಹಾಗೂ ಕಲೆಯ ಸಂಬಂಧ ಕಲ್ಪನೆಯಲ್ಲಿ 'ಆತ್ಮಿಕ' ಮಹಿಳೆಯನ್ನು ಬಳಸಿಕೊಳ್ಳುತ್ತದೆ. ಯೋಧನೂ ಚಿತ್ರಕಾರನೂ




ಕಲ್ಯಾಣಮ್ಮ

* ಹೆಣ್ಣಿಗ

ಆದ ಕುಟುಂಬದ ಹಿರಿಯ ವ್ಯಕ್ತಿ ಅಪೂರ್ಣವಾಗಿ ಉಳಿಸಿದ ಕೃಷ್ಣನ ಚಿತ್ರಪಟದ ಸುತ್ತ ಕತೆ ಇದೆ. ಕುಟುಂಬದ ನಂತರದ ತಲೆಮಾರಿನ ವ್ಯಕ್ತಿ ಅದನ್ನು ವಿದೇಶೀ ಕಲಾವಿಮರ್ಶಕರಿಗೆ ಮಾರಲಿಚ್ಛಿಸುವುದಿಲ್ಲ. ತಮ್ಮ ಕುಟುಂಬದಲ್ಲೇ ಮತ್ತೆ ಆ ಕಲಾವಿದ ಹುಟ್ಟಿ ಚಿತ್ರವನ್ನು ಪೂರೈಸುತ್ತಾನೆಂಬ ಜನ್ಮಾಂತರ ಕಲ್ಪನೆಯನ್ನು ರಾಷ್ಟ್ರದ ಸ್ಥಿತಿಗೆ ಅನ್ವಯಮಾಡಿಕೊಳ್ಳಲಾಗುತ್ತದೆ. ಪಾರತಂತ್ರ್ಯದಿಂದಾಗಿ ಸತ್ತಂತಿರುವ ಭಾರತ ಮಾತೆಯ ಈ ಶರೀರಕ್ಕೆ ಮತ್ತೆ ಹೊಸಜನ್ಮ ಧಾರಣೆಯಾಗುತ್ತದೆ. ಅಲ್ಲಿಯವರೆಗೂ ಕಾಯುವಿಕೆ ಅನಿವಾರ್ಯ. ಇಂಥ ನವಜನ್ಮಧಾರಣೆಯ ರೂಪಕವಾಗಿ ಸೃಜನಶೀಲ ಕಲೆ ಕೂಡ ಇದೆ. ಕಲಾಜೀವನದ ಸಾರ್ಥಕತೆಯ ಮೂಲಕ ಲೇಖಕನೊಬ್ಬ ತನ್ನ ಪಾರತಂತ್ರ್ಯದ ದ್ಯೋತಕವಾಗಿರುವ ಹೆಣ್ಣುತನದ ಕಳಂಕವನ್ನು ನೀಗಬಲ್ಲ. ಅಷ್ಟೇ ಅಲ್ಲ, ಕನ್ಯತ್ವದ ಶುದ್ಧತೆಯು ತಾಯ್ತನ, ಪಾತಿವ್ರತ್ಯದ ಮೂಲಕ ಮತ್ತೂ ಔನ್ನತ್ಯ ಹೊಂದುತ್ತದೆ. ಭಾರತಾಂಬೆಯ ತಾಯ್ತನವನ್ನು ಸಾರ್ಥಕಪಡಿಸುವ ನಿಟ್ಟಿನಲ್ಲಿ ತನ್ನ ಕಲಾಚಟುವಟಿಕೆಗಳನ್ನು ಪ್ರಜನನ ರೂಪಿ ಸಂಕೇತವಾಗಿ ವಿವರಿಸಿಕೊಳ್ಳಲಾಯ್ತು.

ಇಂಥ ಪ್ರಧಾನ ವಿಮರ್ಶೆಯ ಮಾನದಂಡಗಳು ಮಹಿಳಾ ಬರವಣಿಗೆಯಲ್ಲಿ ಕಲಾಸೂಕ್ಷ್ಮತೆಯನ್ನರಸಿ, ಅದು ಇಲ್ಲೆಂಬ ಕಾರಣ ನೀಡಿ ಮೌಲ್ಯಮಾಪನ ಮಾಡಿವೆ. ತಿರುಮಲಾಂಬಾ ಕೃತಿಗಳು ಹಾಗೂ ಮಾಸ್ತಿಯವರ ವಿಮರ್ಶೆಯನ್ನು ಪ್ರಧಾನವಾಗಿ ವಿವೇಚಿಸುತ್ತಿರುವುದರ ಉದ್ದೇಶ–ಪುರುಷ ಸೃಜನಶೀಲತೆಯ ಕುರಿತಾದ ಇಂಥ ಮೀಮಾಂಸೆಯನ್ನು ವಿಮರ್ಶಾತ್ಮಕವಾಗಿ ನಿರಾಕರಿಸುವ ಸಂಕಥನವಾಗಿ ಮಹಿಳಾ ಸಾಹಿತ್ಯವಿದೆ ಎನ್ನುವುದನ್ನು ಮನವರಿಕೆ ಮಾಡಿಕೊಳ್ಳುವುದು. ಸಾಹಿತ್ಯ ಅಧ್ಯಯನದ ಚಟುವಟಿಕೆಯಾಗಿ ಮಾತ್ರ ಮಹಿಳಾ ವಿಮರ್ಶೆಯನ್ನು ನಾನು ಸ್ವೀಕರಿಸಿಲ್ಲ. ಈ ಹೊತ್ತಿನ ಕನ್ನಡ ಸ್ತ್ರೀವಾದಿ ಸಾಹಿತ್ಯ ವಿಮರ್ಶೆಯ ಬರವಣಿಗೆಯಲ್ಲಿ ಅಭ್ಯಾಸನಿರತರಾದವರೆಲ್ಲ ಈ ಉದ್ದೇಶವನ್ನು ವಿಭಿನ್ನ ನೆಲೆಗಳಲ್ಲಿ ಸಾಧಿಸುತ್ತಿರುವವರೇ. ತಿರುಮಲಾಂಬಾ ಕಾಲದಲ್ಲಿದ್ದ ಪುರುಷ ಪ್ರಧಾನ ಕಾವಲುಗೋಪುರ ಈ ಹೊತ್ತೂ ಇದೆ. ಆದರೆ ತಿರುಮಲಾಂಬಾ ರಂಥ ಆದ್ಯ ಲೇಖಕಿಯರು – ತಮ್ಮನ್ನು ಕಾವಲು ಕಾಯುತ್ತಿದ್ದಾರೆಂಬುದು ತಮಗೆ ಗೊತ್ತಿದೆ ಎಂಬುದನ್ನು ತೋರಿಸಿಕೊಡಲಿಲ್ಲ. ಹಾಗಾಗಿ ಈ ಕಾವಲು ಶಕ್ತಿಗಳ ಸಂಹಿತೆಯ ಬಗ್ಗೆ ನೇರ ಪ್ರತಿಭಟನೆ ಮಾಡಲಿಲ್ಲ. ಡಿ.ಆರ್. ನಾಗರಾಜ ರಂಥ ವಿಮರ್ಶಕರು ಕಲ್ಪಿಸುವ ಮೈತ್ರೇಯಿಯಂಥ ಗೃಹವಾದಿನಿ ಮಾದರಿಯಾಗಿ ತಿರುಮಲಾಂಬಾ ಖಂಡಿತ ನಿಲ್ಲದಿರುವಲ್ಲಿಯೇ ಅವರ ವಿಮರ್ಶಾತ್ಮಕ ಎಚ್ಚರವಿದೆ. ಗೃಹವೆಂಬುದು ಹೇಗೆ ಮಹಿಳೆಯ ಪಾಲಿಗೆ ಕ್ರೌರ್ಯ, ದಬ್ಬಾಳಿಕೆಗಳ ಸೆರೆಮನೆಯಾಗಿದೆ ಎಂಬುದನ್ನು ಆಧುನಿಕ ಮಹಿಳಾ ಸಾಹಿತ್ಯ ಮುಖ್ಯವಾಗಿಟ್ಟುಕೊಂಡಿದೆ. ಕೌಟುಂಬಿಕ ದೌರ್ಜನ್ಯ ಕಾನೂನು, ವರದಕ್ಷಿಣೆ ನಿಷೇಧ ಕಾನೂನು, ಲೈಂಗಿಕ ದೌರ್ಜನ್ಯ, ಆಸ್ತಿಹಕ್ಕು ಕಾನೂನುಗಳು ಮಹಿಳಾಬದುಕನ್ನು ಮಾನವೀಯ ನೆಲೆಯಲ್ಲಿ ಸ್ಥಾಪಿಸುವಂತೆ ಮಾಡುವಲ್ಲಿ ಮಹಿಳಾ ಸಂಘಟನೆಗಳು ಕ್ರಿಯಾಶೀಲವಾಗಿವೆ. ಕಾನೂನುಗಳ ಅನುಷ್ಠಾನವೂ ಪುರುಷಪರ ಅಧಿಕಾರ ಶಕ್ತಿಗಳೆದುರು ಕಠಿಣವಾಗಿರುವುದರ ಬಗ್ಗೆ ಪ್ರತಿಭಟನಾತ್ಮಕ ಹೋರಾಟವನ್ನು ರೂಪಿಸಲಾಗುತ್ತಿದೆ.


ವ್ಯವಸ್ಥೆಯಲ್ಲಿ ಪುರುಷ ಹೊಂದಿರುವ ರಿಯಾಯಿತಿಗಳು ಮಹಿಳೆಯ ಬದುಕನ್ನು ದಿನೇ ದಿನೇ ಅಸಹನೀಯಗೊಳಿಸುತ್ತಿವೆ. ದ್ವಿ ಹಾಗೂ ಬಹುಪತ್ನಿತ್ವದ ಕಾರಣ ಕೌಟುಂಬಿಕ ಅಭದ್ರತೆಯಿಂದ ಗಾಸಿಗೊಳಗಾದ ಮಹಿಳೆಯರ ಸಂಕಟಗಳನ್ನು ಪುರುಷ ಕಲಾರಸಿಕತೆ 'ಸಾಮಾಜಿಕ ಸಮಸ್ಯೆ'ಯಾಗಿಯೇ ಸ್ವೀಕರಿಸದು. 18ನೇ ಶತಮಾನದ ಮೈಸೂರು ಅರಸರ ಆಸ್ಥಾನ ಕವಿ ತಿರುಮಲಾರ್ಯನ 'ಚಿಕದೇವರಾಯ ಸಪ್ತಪದಿ' – ಧೀರೆ, ಧೀರಾಧೀರೆ, ಅಧೀರೆ ಎಂಬ ನಾಯಿಕಾ ಭೇದ ಕಲ್ಪಿಸುತ್ತದೆ. ಸವತಿಯೊಂದಿಗಿದ್ದುದ್ದರ ಕುರುಹುಗಳ ಬಗ್ಗೆ ಗಂಡನ ವಿಷಯವಾಗಿ ಹೊಂದುವ ಭಾವಕ್ಕೆ ಅನುಗುಣವಾಗಿ ಕವಿ ಈ ಭೇದ ಕಲ್ಪನೆ ಮಾಡುತ್ತಾನೆ. ತನ್ನ "ಗಂಡ ಮತ್ತೊಬ್ಬ ಹೆಣ್ಣಿನೊಂದಿಗಿದ್ದು ಮನೆಗೆ ಬರುತ್ತಿಲ್ಲ, ಮನೆಗೆ ಬರುವಂತೆ ಮಾಡಿ"– ಎಂದು ಕಾನೂನು ಪಾಲಕರ ಮೊರೆಹೊಕ್ಕರೆ ರಾಜೀ ನ್ಯಾಯದ ಬೋಧೆ ಆಕೆಗೆ ವಾಸ್ತವದಲ್ಲಿ ದೊರೆಯುತ್ತದೆ. ದೂರು ಕೊಡಲು ಹೋದ ಹೆಂಗಸಿನ ಮೇಲೆಯೇ ಕೇಸು ದಾಖಲೆ ಮಾಡಿದ ಉದಾಹರಣೆಗಳುಂಟು. ಜನಪ್ರಿಯ ಕಥಾಸಾಹಿತ್ಯದ ವಿಸ್ತೃತ ರೂಪವಾಗಿರುವ ದೂರದರ್ಶನ ಧಾರಾವಾಹಿಗಳೂ ಮಹಿಳಾ ಹೋರಾಟದ ಆಶಯಗಳಿಗೆ ಹಿನ್ನಡೆಯುಂಟು ಮಾಡುತ್ತಿವೆ. ಎಂ.ಟಿ.ಆರ್. ಬಾದಾಮಿ ಹಾಲನ್ನು ಲೈಂಗಿಕ ದೌರ್ಜನ್ಯ ಸಮಸ್ಯೆಗೆ ಸುಲಭ ಪರಿಹಾರವೇನೋ ಎಂಬಂತೆ ಜಾಹಿರಾತುಗಳಲ್ಲಿ ಬಿಂಬಿಸಲಾಗುತ್ತಿದೆ. ರಾಷ್ಟ್ರೀಯ ಹೋರಾಟ ಸಂದರ್ಭದ ಪುರುಷ ನಿಲುವುಗಳು ನವವಸಾಹತೀಕರಣದ ಸಂದರ್ಭದಲ್ಲಿ ಮತ್ತೂ ಹೆಚ್ಚು ಸ್ತ್ರೀವಿರೋಧಿಯಾಗಿ ಪ್ರಕಟವಾಗುತ್ತಿವೆ. ಕೌಟುಂಬಿಕ ದೌರ್ಜನ್ಯ ಕಾಯಿದೆಯನ್ನು ಒಳಗೊಂಡ ಮಹಿಳಾಪರ ಕಾನೂನುಗಳನ್ನು ಪ್ರತಿಷ್ಠಿತ ಹುದ್ದೆಯ ಪುರುಷರೂ, ಕೆಲವೊಮ್ಮೆ ಮಹಿಳೆಯರೂ ಮಹಿಳೆಗಿರುವ ವಿಶೇಷ ಸವಲತ್ತೆಂದು ತಿಳಿದಿದ್ದಾರೆ. ಈ ಸವಲತ್ತನ್ನು ದುರುಪಯೋಗ ಮಾಡಕೊಡದೆಂಬ ಎಚ್ಚರಿಕೆಯನ್ನು ಸಾರ್ವಜನಿಕ ವೇದಿಕೆಯಲ್ಲಿ ನೀಡುತ್ತಲೇ



ನಿರ್ಭಾಗ್ಯವನಿತೆ : ೧೯೧೧; ಲೇ: ಆರ್. ಕಲ್ಯಾಣಮ್ಮ,
ಪ್ರ : ಶಾರದಾ ಗ್ರಂಥಮಾಲೆ, ಬೆಂಗಳೂರು

ಆ ಕಾನೂನುಗಳಿಗಿರುವ ರಕ್ಷಣಾತ್ಮಕ ಆಶಯವನ್ನು ಮರೆಮಾಚುತ್ತಿದ್ದಾರೆ. ಇಂಥ ಸಾಮಾಜಿಕ ಸನ್ನಿವೇಶದಲ್ಲಿ ಸಾಹಿತ್ಯ ವಿಮರ್ಶೆ ಯಾವ ಬಗೆಯ ಉಪಯುಕ್ತತಾ ಮೌಲ್ಯವನ್ನು ಹೊಂದಿದೆ ಎನ್ನುವುದು ಪ್ರಶ್ನೆಯೇ. ಮಹಿಳಾ ಸಾಹಿತ್ಯದಲ್ಲಿ ಶೋಧಿತಗೊಂಡ ಮಹಿಳಾ ಶೋಷಣೆಯ ವಿಭಿನ್ನ ನೆಲೆಗಳನ್ನು ಕನ್ನಡ ವಿಮರ್ಶಕಿಯರು ಗುರುತಿಸಿ, ವಿಶ್ಲೇಷಣೆಗೆ ಒಳಪಡಿಸುವುದರ ಮೂಲಕ ಮಹಿಳಾ ಸಾಹಿತ್ಯಕ್ಕಿರುವ ಉಪಯುಕ್ತತಾ ಮೌಲ್ಯವನ್ನು ಪ್ರಕಟಪಡಿಸಿದ್ದಾರೆ.

(ಮುಂದುವರೆಯುವುದು....)



ಮಹಿಳೆ ಮತ್ತು ಸಕ್ರಿಯತೆ

■ ಎಚ್.ಎಸ್. ಚಂಪಾವತಿ

ಈ ಪ್ರಬಂಧವನ್ನು ಬರೆಯಲು ಪ್ರಾರಂಭಿಸಿದಾಗ ಸಕ್ರಿಯತೆಯನ್ನು ಹೇಗೆ ವ್ಯಾಖ್ಯಾನಿಸುವುದು, ಹಾಗೂ ಸ್ವಾಯತ್ತ ಮಹಿಳಾ ಚಳವಳಿಯಲ್ಲಿ ಮಹಿಳಾ ಸಕ್ರಿಯ ಭಾಗವಹಿಸುವಿಕೆಯನ್ನು ಯಾವ ತಾತ್ತ್ವಿಕ ಹಿನ್ನೆಲೆಯಲ್ಲಿ ಅರ್ಥೈಸಲಾಗಿದೆ ಎಂಬುದು ನನಗೆ ಮುಖ್ಯ ಪ್ರಶ್ನೆಯಾಯಿತು. ನೇರವಾದ, ಬಹುತೇಕ ಸಂಘರ್ಷಾತ್ಮಕ ಕ್ರಿಯೆ – ಅಂದರೆ ಮೆರವಣಿಗೆ, ಧರಣಿ, ಮುಷ್ಕರ, ಗೋಡೆ ಬರಹ ಇತ್ಯಾದಿಗಳ ಮೂಲಕ ಒಂದು ಕಾರಣವನ್ನು ಬೆಂಬಲಿಸುವುದಕ್ಕೋಸ್ಕರ ಅಥವಾ ವಿರೋಧಿಸುವುದಕ್ಕೋಸ್ಕರ ಹಮ್ಮಿಕೊಳ್ಳುವ, ತೊಡಗಿಸಿಕೊಳ್ಳುವ ಕ್ರಿಯೆಯನ್ನು ಸಕ್ರಿಯ ಭಾಗವಹಿಸುವಿಕೆ ಎಂಬುದಾಗಿ ನಿಘಂಟುಗಳು ಅರ್ಥೈಸುತ್ತವೆ. ಸಾಮಾಜಿಕ ಸಂದರ್ಭವೊಂದರಲ್ಲಿ ಸಕ್ರಿಯವಾಗಿ ಭಾಗವಹಿಸುವ ಧೋರಣೆಯನ್ನು ಕೂಡಾ ಸಕ್ರಿಯ ಭಾಗವಹಿಸುವಿಕೆ ಎಂದು ಅರ್ಥೈಸಲಾಗಿದೆ. ರಾಜಕೀಯ ಅಥವಾ ಸಾಮಾಜಿಕ ಸಂದರ್ಭಗಳಲ್ಲಿ ಬದಲಾವಣೆ ತರುವುದಕ್ಕೋಸ್ಕರ, ಇರುವುದನ್ನು ಉಳಿಸಿಕೊಳ್ಳುವುದಕ್ಕೋಸ್ಕರ ಅಥವಾ ಕೆಲವು ಗುರಿಗಳನ್ನು ಸಾಧಿಸುವುದಕ್ಕೋಸ್ಕರ ಹೆಚ್ಚು ಶಕ್ತಿಯುತವಾಗಿ ಕ್ರಿಯೆಯಲ್ಲಿ ತೊಡಗಿಸಿಕೊಳ್ಳುವುದು ಎಂದು ನಾನು ಇಲ್ಲಿ ಗ್ರಹಿಸಿದ್ದೇನೆ. ಸಕ್ರಿಯತೆ ಎಂದರೆ ಸಂಘರ್ಷಾತ್ಮಕವಾಗಿಯೇ ಇರಬೇಕೇ? ಬೇರೆ ಬೇರೆ ವಿಧಗಳಲ್ಲಿ ಮಹಿಳಾ ಸಕ್ರಿಯತೆ ಅಭಿವ್ಯಕ್ತಿಗೊಂಡಿಲ್ಲವೇ ಎಂಬ ಪ್ರಶ್ನೆ ಎದುರಾದಾಗ ಮಹಿಳಾ ಸಕ್ರಿಯತೆಯ ವಿವಿಧ ಮಾದರಿಗಳ ಕಡೆಗೂ ನಾವು ದೃಷ್ಟಿ ಹರಿಸಬೇಕಾಗುತ್ತದೆ. ಮಹಿಳೆಯರ ಸಕ್ರಿಯತೆಯ ಮಾದರಿಗಳು ಯಾವ ಯಾವ ಸಮಸ್ಯೆಗಳನ್ನು ಯಾವ ರೀತಿಯಲ್ಲಿ (address) ಸಂಬೋಧಿಸಿವೆ? ಹೀಗೆ ಮಾಡಿದ ಸಕ್ರಿಯತೆಯ ಮೂಲಕ ಯಾವ ಯಾವ ಸಮಸ್ಯೆಗಳನ್ನು ಹೇಗೆ ಅರ್ಥೈಸಿಕೊಂಡಿದ್ದಾರೆ? ಹಾಗೂ ಅವುಗಳ ಪರಿಣಾಮ ಇಂದು ಏನಾಗಿದೆ ಎಂಬುದನ್ನೂ ಕೂಡಾ ನಾವು ಚಿಂತಿಸಬೇಕಾಗುತ್ತದೆ. ಸಕ್ರಿಯತೆಯಲ್ಲಿಯೇ ಭಿನ್ನ ಭಿನ್ನ ಮಾದರಿಗಳು ಇರುವುದರಿಂದ ಇಲ್ಲಿ ನಾನು ಪ್ರತಿಪಾದಿಸುತ್ತಿರುವ ಕ್ರಿಯಾವಾದದ ತಾತ್ತ್ವಿಕ ಚಿಂತನೆಯನ್ನು ಸ್ಪಷ್ಟ ಪಡಿಸಿಕೊಂಡೇ ಭಿನ್ನ ಮಾದರಿಗಳತ್ತ ಗಮನ ಹರಿಸುತ್ತೇನೆ.

ಶಾಂತಿದೂತೆ, ಸ್ತ್ರೀವಾದಿ, ಸಮಾಜವಾದಿ, ಅಹಿಂಸಾವಾದದ ನೇರ ಕಾರ್ಯಕರ್ತೆ ಎಂದು ತನ್ನನ್ನು ಗುರುತಿಸಿಕೊಂಡ ಅಮೆರಿಕಾದ ಬರ್ನಸ್ ಎ ಕ್ಯಾರೋಲ್ ತಮ್ಮ 'Three Faces of Trivia' ಎನ್ನುವ ಲೇಖನದಲ್ಲಿ ಹೀಗೆ ಹೇಳುತ್ತಾರೆ:

``... The line between activism and scholarship, if there is a line at all, is difficult to discern..... Activism and scholarship were woven together to create the strength of action and intellect that we brought together to history?..."

ಇವರ ಪ್ರಕಾರ ಸಿದ್ಧಾಂತ ಹಾಗೂ ಆಚರಣೆಯ ನಡುವಿನ ಮಿಳಿತದಿಂದಾಗಿ ಮೂರನೆಯ ಆಯಾಮ, ಅಂದರೆ ಅಸ್ತಿತ್ವ ಲಭಿಸುತ್ತದೆ. ಬೌದ್ಧಿಕತೆ ಹಾಗೂ ಸಕ್ರಿಯತೆಯ ಮಧ್ಯೆ ಒಂದು ಕಂದರ ಇರುತ್ತದೆ ಎನ್ನುವುದನ್ನು ಸ್ವಾಯತ್ತ ಮಹಿಳಾ ಚಳವಳಿ ತಿರಸ್ಕರಿಸುತ್ತದೆ. ಕ್ರಿಯಾವಾದ ಹಾಗೂ ಬೌದ್ಧಿಕವಾಗಿ ತೊಡಗಿಸಿಕೊಳ್ಳುವುದು ಒಂದರೊಳಗೊಂದು ತಳಕು ಹಾಕಿಕೊಂಡಿವೆ ಹಾಗೂ ಅವುಗಳನ್ನು ಪ್ರತ್ಯೇಕಗೊಳಿಸುವುದು ಸಾಧ್ಯವಿಲ್ಲ ಎಂಬ ತಾತ್ತ್ವಿಕ ಚಿಂತನೆಯೊಂದಿಗೆ ಸ್ವಾಯತ್ತ ಮಹಿಳಾ ಚಳವಳಿ ತನ್ನ ಹೋರಾಟ ತಂತ್ರ ರೂಪಿಸಿಕೊಂಡಿದೆ.

ಈ ಗ್ರಹಿಕೆಯಿಂದಲೇ ಇಲ್ಲಿ ಮಹಿಳಾ ಸಕ್ರಿಯತೆಯನ್ನು ಅವಲೋಕಿಸಲಾಗಿದೆ. ಮಹಿಳಾ ಸಕ್ರಿಯತೆಯ ಹಲವಾರು ಮಾದರಿಗಳನ್ನು ಹೀಗೆ ಗುರುತಿಸಬಹುದಾಗಿದೆ:

- ನಿಷ್ಕ್ರಿಯ ಪ್ರತಿರೋಧದ ಹೋರಾಟ
- ಸುಧಾರಣಾವಾದಿ ಮಹಿಳಾ ಸಕ್ರಿಯತೆ
- ಹಿಂಸಾತ್ಮಕ ಪ್ರವೃತ್ತಿಯ ಮಹಿಳಾ ಹೋರಾಟ
- ಅಹಿಂಸಾತ್ಮಕ ಮಾದರಿಯ ಭಾಗವಹಿಸುವಿಕೆ
- ನೇರವಾಗಿ ಸಂಘರ್ಷಗಳಿಗೆ ಮುಖಾಮುಖಿಯಾಗಿರುವುದು
- ಕಾನೂನಿನ ಚೌಕಟ್ಟಿನೊಳಗೆ ಮಹಿಳೆಯರು ನಡೆಸಿರುವ ಹೋರಾಟ.

ಹೀಗೆ ನಮ್ಮ ಹೋರಾಟಗಳಲ್ಲಿ ನಮಗೆ ಬೇರೆ ಬೇರೆಯಾದ ರೀತಿಯ ಹಣೆಪಟ್ಟಿಗಳು ಇರಬಹುದು. ಸ್ತ್ರೀವಾದಿ, ಸುಧಾರಣಾವಾದಿ, ದಲಿತ ಕಾರ್ಯಕರ್ತೆ, ಲೇಖಕಿ, ಪರಿಸರವಾದಿ, ರೈತ ಹೋರಾಟಗಾರ್ತಿ ಮಹಿಳಾ ಚಳವಳಿಯ ಕಾರ್ಯಕರ್ತೆ, ಕಾರ್ಮಿಕ ಸಂಘಟನೆಯ ಕಾರ್ಯಕರ್ತೆ ಇತ್ಯಾದಿ. ಈ ಹಣೆಪಟ್ಟಿಗಳು ಏಕಶಿಲಾಕೃತಿಯ ಹೋರಾಟದ ಅಥವಾ ಚಿಂತನೆಯ ಮಾದರಿಯನ್ನು ಹೇಳುವುದಿಲ್ಲ. ಅನೇಕಾನೇಕ ಬಗೆಗಳಲ್ಲಿ ಮಹಿಳೆಯರು ತಮ್ಮ ಅಸ್ತಿತ್ವವನ್ನು ಗುರುತಿಸಿಕೊಳ್ಳಲು ಹೋರಾಟ ನಡೆಸುತ್ತಲೇ ಬಂದಿದ್ದಾರೆ. ಮಹಿಳೆಯರ ಈ ಎಲ್ಲಾ ವಿಧದ ಸಕ್ರಿಯತೆಯಲ್ಲಿ ಕೂಡಾ ಅವರ ಬೌದ್ಧಿಕ ಚಿಂತನೆ ಅವರ ಹೋರಾಟದ ಜೊತೆಗೇ ತಳುಕು ಹಾಕಿಕೊಂಡು ಅಭಿವ್ಯಕ್ತಿಗೊಂಡಿರುವುದನ್ನು ನಾವು ಗುರುತಿಸಬಹುದಾಗಿದೆ.

19ನೆಯ ಶತಮಾನದ ಆದ್ಯ ಲೇಖಕಿಯರು ಮುಖ್ಯವಾಗಿ ತಿರುಮಲಾಂಬ, ಕಲ್ಯಾಣಮ್ಮನವರು ಕಥೆ–ಬದುಕು–ಹೋರಾಟ–ಬಿಡುಗಡೆಗೆ ನೇರ ಅರ್ಥ ಕಲ್ಪಿಸಿಕೊಂಡು ಬರಹಗಳ ಮೂಲಕ ವಿಮೋಚನೆಯ ಹಾದಿ ತುಳಿದಿದ್ದರು ಎಂದು ವಿಮರ್ಶಕಿ

ಡಾ॥ ಸುಮಿತ್ರಾಬಾಯಿ ಗುರುತಿಸುತ್ತಾರೆ. ಹೀಗೆ ಬದುಕು–ಬರಹ–ಪತ್ರಿಕೆ–ಸಂಘಟನೆಯ ಜೊತೆಗೆ ನೇರ ನೇರವಾಗಿ ಸ್ಪಂದಿಸಿದ ತಿರುಮಲಾಂಬ, ಕಲ್ಯಾಣಮ್ಮ ಮೊದಲಾದವರು ತಾವು ಇದ್ದ ಚಾರಿತ್ರಿಕ ಸಂದರ್ಭದಲ್ಲಿ ಪ್ರತಿರೋಧಗಳನ್ನು ಎದುರಿಸುತ್ತಲೇ ಬರೆದರು. ಡಾ॥ ಪ್ರೀತಿ ಶುಭಚಂದ್ರರವರು ಹೇಳುವ ಹಾಗೆ ಮಾಸ್ತಿಯವರು ಹಾಗೂ ವಾಗ್ಭೂಷಣ ಪತ್ರಿಕೆಯ ಸಂಪಾದಕರು ತಿರುಮಲಾಂಬ ರವರ ಬರಹಗಳಿಗೆ ಮಾಡಿದ ಟೀಕೆ, ಆಕ್ಷೇಪಣೆಗಳಲ್ಲಿ ಈ ಪ್ರತಿರೋಧಗಳನ್ನು ಗುರುತಿಸಬಹುದು. ಸರಸ್ವತಿಬಾಯಿ ರಾಜವಾಡೆಯವರ ಬರಹವನ್ನು ಕುರಿತು ಅ.ನ.ಕೃ., ರಾಜವಾಡೆಯವರ ಸಾಹಿತ್ಯಕ್ಕೆ ಎರಡು ಅಲಗು ಎಂದಿದ್ದರು. ಹಾಗೂ ಅವರು ಮಠಗಳ ಬಗ್ಗೆ ದಿಟ್ಟವಾಗಿ ವಿರೋಧಿಸಿ ಬರೆಯುತ್ತಿದ್ದುದನ್ನು ಧರ್ಮಾಧಿಕಾರಿಯೊಬ್ಬರು ಗಮನಿಸಿ **ಆ ಮಹಿಳೆ ದಿಟ್ಟವಾಗಿ ಬರೆಯುತ್ತಾಳೆ** ಎಂದಿದ್ದರು. ಸಾಂಪ್ರದಾಯಿಕ ದೃಷ್ಟಿಕೋನದಲ್ಲಿಯೇ ಮಹಿಳಾ ಶಿಕ್ಷಣ, ವಿಧವೆಯರ ಬದುಕು, ಮಹಿಳೆಯರ ಬದುಕಿನ ಚಿತ್ರಣಗಳನ್ನು ಕಂಡಿದ್ದ ಈ ಆದ್ಯ ಲೇಖಕಿಯರು ಬರವಣಿಗೆಯನ್ನು ಸಕ್ರಿಯತೆಯಿಂದ ಬೇರ್ಪಡಿಸಿ ನೋಡಿರಲಿಲ್ಲ.

ಸಾಹಿತ್ಯ, ಬದುಕು, ಸಮಾಜದ ಮೌಲ್ಯಗಳ ನಡುವೆ ಇರುವ ಕೊಂಡಿಯನ್ನು ಬರೆಯುತ್ತಲೇ ಹೋರಾಡುವುದು, ಸಕ್ರಿಯರಾಗುವುದು ಇವರಿಗೆ ಚಾರಿತ್ರಿಕ ಅಗತ್ಯವಾಗಿತ್ತು. ಈ ರೀತಿಯ ಚಾರಿತ್ರಿಕ ಅಗತ್ಯದ ಹಿನ್ನೆಲೆಯಲ್ಲಿಯೇ ಕೋಮುವಾದಿ ಶಕ್ತಿಗಳ ಕೆಂಗಣ್ಣಿಗೆ ಗುರಿಯಾದ ಸಾರಾ ಅಬೂಬಕರ್ ಹಾಗೂ ಬಾನುಮುಷ್ತಾಕ್ ರವರ ಬರವಣಿಗೆಯನ್ನು ಕೂಡಾ ಕಾಣಬಹುದು. 19ನೆಯ ಶತಮಾನದ ಲೇಖಕಿಯರು ಸಾಹಿತ್ಯ ಪರಂಪರೆಯ ಭಾಗ ಎಂದು ಗುರುತಿಸುವುದಕ್ಕೆ 20ನೆಯ ಶತಮಾನದ ಲೇಖಕಿಯರು, ವಿಮರ್ಶಕಿಯರು ಸಂಶೋಧನೆಗಳ ಮೂಲಕ ಹಲವಾರು ಕೃತಿಗಳನ್ನು ಪ್ರಕಟಿಸಿ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡು ಹೋರಾಡುವುದೂ ಕೂಡಾ ಮುಖ್ಯವಾಗಿತ್ತು.

ರಾಷ್ಟ್ರೀಯವಾದದ ಆಂದೋಲನದಲ್ಲಿ ಪುನರುತ್ಥಾನದ ಮಾದರಿ ವಿಕಾಸವಾದದ ಮಾದರಿಯನ್ನು ತನಗೆ ಬೇಕಾದಂತೆ ಮಾರ್ಪಡಿಸಿಕೊಂಡಿತು ಎನ್ನುವುದನ್ನು ಡಾ॥ ಪ್ರೀತಿಶುಭಚಂದ್ರರವರು ತಮ್ಮ 'ಮಹಿಳಾ ವಿಮರ್ಶೆ ಮತ್ತು ಸಂಶೋಧನೆ' ಎಂಬ ಲೇಖನದಲ್ಲಿ ಗುರುತಿಸುತ್ತಾರೆ. ಗತ ವೈಭವದ ಪುನರುತ್ಥಾನದ ಆಶಯವು ಶುದ್ಧಾತ್ಮಕ ಸಂಕೇತವಾದ ಮಹಿಳೆಯನ್ನು ಸಂಸ್ಕೃತಿಯ ಪಾಲಕಿ, ಪೋಷಕಿ ಹಾಗೂ ವಾಹಕಿಯನ್ನಾಗಿಸಿತು ಎಂದು ಪ್ರೀತಿ ಶುಭಚಂದ್ರರವರು ಬರೆಯುತ್ತಾರೆ. ಸ್ವಾತಂತ್ರ್ಯ ಚಳವಳಿಯಲ್ಲಿ ಧುಮುಕಿದ ಮಹಿಳೆಯರು ತದನಂತರದ ರಾಜಕೀಯದಲ್ಲಿ ಕುಟುಂಬ ನಿರ್ವಹಣೆಯ ಕಾರ್ಯಗಳಿಗೇ ವಾಪಸ್ಸು ಹೋದದ್ದು ಯಾಕೆ ಎನ್ನುವ ಪ್ರಶ್ನೆ ಲಿಂಗರಾಜಕಾರಣವನ್ನು ರಾಷ್ಟ್ರೀಯವಾದ ನಿರ್ವಹಿಸಿದ ಬಗೆಯನ್ನು ಹೇಳುತ್ತದೆ. ಆಂಧ್ರಪ್ರದೇಶದ ತೆಲಂಗಾಣ ಚಳವಳಿಯಲ್ಲಿ ಭಾಗವಹಿಸಿದ ಮಹಿಳೆಯರನೇಕರ ಕತೆಗಳೂ ಕೂಡಾ ಕುಟುಂಬದ ಒಳಗಿರುವ ಹಾಗೂ ರಾಜಕೀಯ ಪಕ್ಷಗಳೊಳಗಿರುವ ಲಿಂಗರಾಜಕಾರಣದ ಮೇಲೆ ಬೆಳಕು ಚೆಲ್ಲುತ್ತವೆ. ಮಹಿಳೆಯರ ಸಕ್ರಿಯತೆಯು ಆಯ್ಕೆಯಿಂದಲೋ ಅಥವಾ ಅನಿವಾರ್ಯತೆ ಯಿಂದಲೋ ಇಂತಹ ರಾಷ್ಟ್ರೀಯ ಆಂದೋಲನ ಚಳವಳಿಯ ಭಾಗವಾಗಿದ್ದರೂ ಮಹಿಳೆಯರ ಬದುಕನ್ನು ಕೌಟುಂಬಿಕ ಪಾತ್ರಗಳಿಗೆ ಹೊಂದಿಸುವುದೇ ಆಗುತ್ತಿತ್ತು ಎಂಬುದನ್ನು ರಾಷ್ಟ್ರೀಯವಾದದ ಆಂದೋಲನದಲ್ಲಿ ಹಾಗೂ ಇತರ ರಾಜಕೀಯ ಹೋರಾಟಗಳಲ್ಲಿ ಮಹಿಳಾ ಸಕ್ರಿಯತೆ ಸ್ಪಷ್ಟಪಡಿಸಿದೆ.

ಪ್ರತಿಯೊಂದು ಕ್ಷೇತ್ರದ ಮಹಿಳೆಯರಿಗೂ ಕುಟುಂಬದ ಒತ್ತಡಗಳನ್ನು ನಿಭಾಯಿಸಿ ಸಕ್ರಿಯವಾಗಿ ಸಾಮಾಜಿಕ ಹೋರಾಟಗಳಲ್ಲಿ ತೊಡಗಿಸಿಕೊಳ್ಳುವ ಸವಾಲುಗಳು ಎಂದಿನಿಂದಲೂ ಇವೆ. ಕುಟುಂಬದ ಒಳಗೇ ಪುರುಷ ಪ್ರಧಾನ ಮೌಲ್ಯಗಳನ್ನು ಭಾವನಾತ್ಮಕ ನೆಲೆಯಲ್ಲಿ, ವೈಯಕ್ತಿಕ ನೆಲೆಯಲ್ಲಿ ತಮಗೆ ತೋಚಿದ ರೀತಿಯಲ್ಲಿ ಪ್ರತಿರೋಧಿಸುತ್ತಲೇ ಬಂದಿರುವ ಸಾವಿರಾರು ಮಹಿಳೆಯರು ನಮ್ಮ ಮುಂದೆ ಇದ್ದಾರೆ. ಪ್ರತಿಯೊಬ್ಬ ಮಹಿಳೆಯ ಬದುಕಿನ ತೊಡಕುಗಳು ಸಮಾಜದಲ್ಲಿ ಪ್ರಚಲಿತವಾಗಿರುವ ಮೌಲ್ಯಗಳ ಜೊತೆ ಹೆಣೆದುಕೊಂಡಿರುವು ದರಿಂದ ಆಕೆ ಅವುಗಳಿಂದ ಬಿಡಿಸಿಕೊಳ್ಳುತ್ತಲೇ ಸಮಾಜ ಮುಖಿಯಾಗಬೇಕಾಗುತ್ತದೆ. ಹೀಗಾಗಿ ಮಹಿಳೆ ಮತ್ತು ಆಕೆಯ ಸಕ್ರಿಯ ಪಾಲ್ಗೊಳ್ಳುವಿಕೆಯ ಬಗ್ಗೆ ಮಾತನಾಡುವಾಗ ಆಕೆಯ 'ವೈಯಕ್ತಿಕ' ಎಂಬುದನ್ನು ಆಕೆಯ 'ಸಾಮಾಜಿಕ' ನೆಲೆಯಿಂದ ಬಿಡಿಸಿ ನೋಡಲು ಸಾಧ್ಯವಿಲ್ಲ. ಈ ಅರ್ಥದಲ್ಲೂ ಕೂಡಾ ನಾವು personal is political ಎಂಬ ಹೇಳಿಕೆಯನ್ನು ಅರ್ಥ ಮಾಡಿಕೊಳ್ಳಬಹುದಾಗಿದೆ. ಆಕೆಯ ಶ್ರಮ, ಲೈಂಗಿಕತೆ, ಪುನರ್ ಉತ್ಪಾದನೆ, ವಿವಾಹ, ತಾಯ್ತನ, ಚಲನವಲನ ಇತ್ಯಾದಿಗಳು ಒಟ್ಟಾಗಿ ಆಕೆಯ ಅಸ್ತಿತ್ವದ ಸ್ವರೂಪವನ್ನು ನಿರ್ಧರಿಸುತ್ತವೆ. ಈ ಸ್ವರೂಪದ ಮೇಲೆ ಆಕೆ ಇರುವ ಕುಟುಂಬ ಹೇಗೆ ಒತ್ತಡ ಹೇರುತ್ತದೆ, ಆ ಒತ್ತಡಗಳ ಸವಾಲುಗಳನ್ನು ಆಕೆ ಹೇಗೆ, ಯಾವ ತಾತ್ತ್ವಿಕ ಗ್ರಹಿಕೆ, ಚಿಂತನೆಯಲ್ಲಿ ಸ್ವೀಕರಿಸಿದ್ದಾಳೆ ಹಾಗೂ ಸ್ವೀಕರಿಸುತ್ತಾಳೆ ಎನ್ನುವುದು ಆಕೆಯ ಸಾಮಾಜಿಕ ಸ್ತರದ ಸಕ್ರಿಯ ಪಾಲ್ಗೊಳ್ಳುವಿಕೆಯ ವಿಧಾನವನ್ನು ನಿರ್ಧರಿಸುತ್ತದೆ.

1975ರ ದಶಕದಲ್ಲಿ ಸ್ವಾಯತ್ತ ಮಹಿಳಾ ಚಳವಳಿ ಮತ್ತು ಮಹಿಳಾ ಸಕ್ರಿಯತೆ ಕುಟುಂಬದ ಸ್ವರೂಪ, ಪಕ್ಷ ರಾಜಕಾರಣದ ಸ್ವರೂಪವನ್ನೇ ಪ್ರಶ್ನಿಸುತ್ತಾ ವರದಕ್ಷಿಣೆ, ವಿವಾಹ, ಅತ್ಯಾಚಾರ, ಪೊಲೀಸ್ ಕಸ್ಟಡಿಯಲ್ಲಿ ಮಹಿಳೆಯರ ಮೇಲಿನ ಹಿಂಸಾಚಾರ ಗಳನ್ನು ವಿರೋಧಿಸುತ್ತಲೇ ಕೌಟುಂಬಿಕ ದೌರ್ಜನ್ಯಗಳ ವಿರುದ್ಧ ಹೋರಾಟ ನಡೆಸಿದೆ. ಕಾನೂನುಗಳ ಚೌಕಟ್ಟುಗಳನ್ನು ಪ್ರಶ್ನಿಸಿ ಅನೇಕ ಕಾನೂನುಗಳ ತಿದ್ದುಪಡಿಗೆ ಕಾರಣವಾಗಿದೆ. ಕೌಟುಂಬಿಕ ಹಿಂಸೆಗಳ ಅನೇಕ ಸ್ವರೂಪಗಳನ್ನು ಬಯಲಿಗೆಳೆದು



ಒಟ್ಟು ಸಮಾಜದ ರಚನೆಯ ಬದಲಾವಣೆಗಾಗಿ ಮಹಿಳಾ ಹೋರಾಟ ಒತ್ತಡವನ್ನು ಹೇರುತ್ತಲೇ ಬರುತ್ತಿದೆ.

80ರ ದಶಕದಿಂದ ಇಲ್ಲಿಯವರೆಗೆ ಕೋಮುವಾದಿ ಶಕ್ತಿಗಳ ಉದ್ದೇಶ, ಹುನ್ನಾರಗಳನ್ನು ಪ್ರಶ್ನಿಸುತ್ತಾ ಬಂದಿರುವ ಮಹಿಳಾ ಹೋರಾಟ – ಬಾಬರಿ ಮಸೀದಿಯ ನಾಶದಿಂದ ಹಿಡಿದು ದತ್ತಪೀಠದ ವಿವಾದದ ಸುತ್ತ ಸಂಘರ್ಷಾತ್ಮಕವಾಗಿ ಸಕ್ರಿಯತೆಯಿಂದ ಪಾಲ್ಗೊಂಡಿದೆ. 80–90ರ ದಶಕದಲ್ಲಿ ಕೋಮುವಾದಿ ಚಿಂತನೆ, ಭಾಷೆಯ ಬಗ್ಗೆ ಹೆಚ್ಚು ಜಾಗೃತರಾಗಿರಬೇಕೆಂಬ ದೃಷ್ಟಿಯಿಂದ ಸಮಾನ ನಾಗರಿಕ ಸಂಹಿತೆಯ ಬಗ್ಗೆ ಮಹಿಳಾಚಳವಳಿ ಅದರದೇ ಆದ ವಿಭಿನ್ನ ನಿಲುವುಗಳನ್ನು ತೆಗೆದುಕೊಂಡು ಕ್ರಿಯಾತ್ಮಕವಾಗಿ ಪ್ರತಿಪಾದಿಸುತ್ತಾ ಬಂದಿದೆ. ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಕಬೀರ್ ಉತ್ಸವದಲ್ಲಿ ಅಂತರಂಗದ ಬದಲಾವಣೆಗಳು ಸಮಾಜಮುಖಿಯಾದ ಸೌಹಾರ್ದ ವಾತಾವರಣಕ್ಕೆ ಎಷ್ಟು ಅಗತ್ಯ ಎಂಬುದನ್ನು ಸೂಫಿಯ ಹಾಡುಗಳನ್ನು, ಸಾಕ್ಷ್ಯಚಿತ್ರಗಳನ್ನು ಸಂಘಟಿಸುವುದರ ಮೂಲಕ ಮಹಿಳಾ ಸಕ್ರಿಯತೆ ತೋರಿಸಿಕೊಟ್ಟಿದೆ. ಮಹಿಳಾ ಸಕ್ರಿಯತೆ ಇಂದು ಸಮರ್ಥವಾಗಿ, ನ್ಯಾಯಯುತವಾಗಿ, ಹಲವಾರು ಸವಾಲುಗಳಿಗೆ ಸಂಘರ್ಷಾತ್ಮಕವಾಗಿ, ಶಾಂತಿಯುತವಾಗಿ ಉತ್ತರಗಳನ್ನು ನೀಡುತ್ತಾ ಪಿತೃಪ್ರಧಾನ – ಬಂಡವಾಳಶಾಹಿ ಸಮಾಜದ ಸ್ವರೂಪದ ಬದಲಾವಣೆಗೆ ಒತ್ತಡಗಳನ್ನು ಹೇರುತ್ತಲೇ ಬಂದಿದೆ.



ಜಾಗತೀಕರಣದ ಸಂಘರ್ಷಗಳನ್ನು ಮಾಮೂಲಿಯಾಗಿ ಸಾಂಸ್ಕೃತಿಕ ನೆಲೆಗಳಲ್ಲಿ ಎದುರಿಸಬಯಸುವ ಕೋಮುವಾದದ ರಾಜಕಾರಣ ಭಾರತೀಯ ಸಂಸ್ಕೃತಿಯ ಹೆಸರಿನಲ್ಲಿ ಕುಟುಂಬದ ಚೌಕಟ್ಟಿಗೇ ಆಕೆಯನ್ನು ವಾಪಸ್ಸು ಕಳಿಸುವ ಹುನ್ನಾರಗಳನ್ನು ನಡೆಸುತ್ತಿದೆ. ಜಾಗತೀಕರಣ ಹಾಗೂ ಕೋಮುವಾದಿ ಶಕ್ತಿಗಳು ತಮ್ಮ ಅನುಕೂಲಕ್ಕೆ ಬೇಕಾದಾಗಲೆಲ್ಲಾ ಪಿತೃಪ್ರಾಧಾನ್ಯವನ್ನು ಬಗಲಲ್ಲಿ ಇಟ್ಟುಕೊಂಡು ವ್ಯವಹರಿಸುತ್ತವೆ. ಇದೆಲ್ಲವನ್ನು ಒಟ್ಟಾಗಿ ಮಹಿಳಾ ಸಕ್ರಿಯತೆ ಸಂಘರ್ಷಾತ್ಮಕ ರೀತಿಯಲ್ಲಿಯೇ ವಿರೋಧಿಸಿ ಹೋರಾಟ ನಡೆಸಿದೆ.

ಈ ರೀತಿಯ ಹೋರಾಟಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುತ್ತಲೇ ಬಂದಿರುವ ಸ್ವಾಯತ್ತ ಮಹಿಳಾ ಚಳವಳಿ ಅದರ ಸ್ವಾಯತ್ತತೆಯನ್ನು ಅಧಿಕಾರದ ನಿರಾಕರಣ, ಪಕ್ಷ ರಾಜಕಾರಣದ ನಿರಾಕರಣ ಹಾಗೂ ಅನುದಾನದ ನಿರಾಕರಣದಿಂದ ಸಮರ್ಥಿಸಿಕೊಂಡಿದೆ. ಸಂಘಟನೆಯಲ್ಲಿ ಶ್ರೇಣಿ ರಹಿತವಾಗಿರುವುದು, ಸಾಮೂಹಿಕ ಚಿಂತನೆಗೆ ಒತ್ತುಕೊಡುವುದು ಮತ್ತು ಪ್ರತಿಯೊಬ್ಬರ ಸಾಮರ್ಥ್ಯಗಳನ್ನು ಒಟ್ಟುಗೂಡಿಸಿಕೊಂಡು ಹೋರಾಡುವ ಪರಿಕಲ್ಪನೆಗಳನ್ನು ಸ್ವಾಯತ್ತ ಮಹಿಳಾ ಚಳವಳಿ ಆರಂಭದಿಂದಲೂ ಪ್ರತಿಪಾದಿಸುತ್ತಲೇ ಬಂದಿದೆ. ಪ್ರಭುತ್ವ ಹಾಗೂ ಇತರ ಅಧಿಕಾರಗಳ ಜೊತೆ ಮುಖಾಮುಖಿಯಾಗಿ ಹೋರಾಡುತ್ತಲೇ 'power of the powerless'ನ್ನು, ಅಂತರಂಗದ ಸಾಮರ್ಥ್ಯಗಳನ್ನು ಗುರುತಿಸುವತ್ತ ಕೂಡಾ ಜೊತೆ ಜೊತೆಯಾಗಿಯೇ ಪ್ರಯತ್ನಿಸಿದೆ.

ಸ್ವಾಯತ್ತ ಮಹಿಳಾ ಚಳವಳಿಯೂ ಸೇರಿದಂತೆ ಇತರ ಮಹಿಳಾ ಚಳವಳಿಯನ್ನು ಪ್ರಶ್ನಿಸಿ ಬೆಳೆಯುತ್ತಿರುವ ದಲಿತ ಮಹಿಳಾ ಚಳವಳಿ – ಒಳಮೀಸಲಾತಿ, ದಲಿತ ಮೀಸಲಾತಿಯ ಒಳಗೆ ಮಹಿಳಾ ಮೀಸಲಾತಿಯಂತಹ ಪ್ರಶ್ನೆಗಳನ್ನು ಮಹಿಳಾ ಹೋರಾಟದ ಜೊತೆಗೆ ಎತ್ತುತ್ತಿದೆ. ಲೈಂಗಿಕ ಕಾರ್ಯಕರ್ತೆಯರು ತಮ್ಮ ದೇಹಗಳನ್ನು ಬಳಸಲು ಹಕ್ಕು ಹೊಂದಿದ್ದಾರೆ ಎಂಬ ಸ್ವಾಯತ್ತ ಮಹಿಳಾ ಚಳವಳಿಯ ಪರಿಕಲ್ಪನೆಯನ್ನು ದಲಿತ ಮಹಿಳಾ ಚಳವಳಿ ಇಂದು ಪ್ರಶ್ನಿಸುತ್ತಿದೆ. ಲೈಂಗಿಕ ಕಾರ್ಯಕರ್ತೆಯರಾದ ಎಷ್ಟು ಜನ ದಲಿತ ಮಹಿಳೆಯರು ತಮ್ಮ ಸ್ವತಂತ್ರ ಆಯ್ಕೆಯಿಂದಲೇ ಈ ರೀತಿಯ ಉದ್ಯೋಗಗಳಲ್ಲಿ ತೊಡಗಿರುತ್ತಾರೆ? ಹಳ್ಳಿಗಳಲ್ಲಿ ದಲಿತ – ಆದಿವಾಸಿ ಮಹಿಳೆಯರನ್ನು ಲೈಂಗಿಕ ಕಾರ್ಯಕರ್ತೆಯರಾಗಿ ದುಡಿಯಲು ಒತ್ತಾಯಿಸುವ ಸಾಮಾಜಿಕ ಹುನ್ನಾರಗಳ ವಿರುದ್ಧ ಹೋರಾಡುವ ಅಗತ್ಯವಿದೆ ಎಂಬ ವಿಚಾರಧಾರೆಯನ್ನು ದಲಿತ ಚಳವಳಿ ನಮ್ಮ ಮುಂದೆ ಇಟ್ಟಿದೆ. ದಲಿತ ಮಹಿಳೆಯರು, ಆದಿವಾಸಿ ಮಹಿಳೆಯರನ್ನು ಅವರ ಸಮಸ್ಯೆಗಳ ಸುತ್ತ ಸಂಘಟಿಸಿ ಹೋರಾಡುವ ಅಗತ್ಯಗಳನ್ನು, ಜಾತಿ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ಹೋರಾಡಬೇಕಾದ ಜರೂರಿಯನ್ನು ದಲಿತ ಮಹಿಳಾ ಚಳವಳಿ ನಮ್ಮ ಮುಂದೆ ಇಟ್ಟಿದೆ.

'Seed is the froot link in the food chain' and 'saving seed is our duty and sharing seed is our culture' ಎನ್ನುವ ಪರಿಸರವಾದಿ ವಂದನಾಶಿವರವರ ತಾತ್ತ್ವಿಕ ಚಿಂತನೆಗಳು ಸಾವಯವ ಕೃಷಿಯಲ್ಲಿ ಹಾಗೂ ಸಾಮಾನ್ಯ ಕೃಷಿಯಲ್ಲಿ ತೊಡಗಿಸಿಕೊಂಡ ಕೃಷಿಕಾರ ಮಹಿಳೆಯರಲ್ಲಿ ಕಂಡುಬರುತ್ತಿವೆ. ಕೃಷಿ ಮಹಿಳೆಯರ ಬೀಜದ ಸಂಗ್ರಹಣೆ ಕುರಿತಾದ ಜ್ಞಾನದ ಮಹತ್ವವನ್ನು ಬೆಳಕಿಗೆ ತರುವಂತಹ ಕಾರ್ಯದಲ್ಲಿ ಅನೇಕ ಕಾರ್ಯಕರ್ತೆಯರು ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ನಿತ್ಯ ಬದುಕಿನ ನಿರ್ವಹಣೆಯ ಆರ್ಥಿಕತೆಯನ್ನು ಕೃಷಿ ಕುಟುಂಬಗಳಲ್ಲಿ ಹೇಗೆ ಮಹಿಳೆಯರು ಉಳಿಸಿಕೊಂಡು ಹೋಗುತ್ತಿದ್ದಾರೆಂಬುದರ ಮೇಲೆ ಮಹಿಳಾ ಸಕ್ರಿಯತೆ ಬೆಳಕು ಚೆಲ್ಲಿದೆ. ಹಾಗೆಯೇ ರೈತ ನಾಯಕಿಯರು ರೈತ ಸಂಘಟನೆಯ ಬಗ್ಗೆ, ನಾಯಕತ್ವದ ಬಗ್ಗೆ ಪ್ರಶ್ನೆಗಳನ್ನು ಎತ್ತುತ್ತಾ ಶ್ರೇಣಿರಹಿತವಾಗಿರತಕ್ಕಂತಹ, ಸಾಮೂಹಿಕ ನಿರ್ಧಾರ

Edited, Printed, Published and owned by Rajeshwari H.S., No. 114/5, 9th Cross, 2nd Main, Chamarajpet, Bangalore - 560 018.
Printed at ILA Mudrana, No. 36, 40 Ft. Road, Raghavanagara, New Timberyard Layout, Bangalore - 560 026.
Published at No. 114/5, 9th Cross, 2nd Main, Chamarajpet, Bangalore - 560 018. Editor : Rajeshwari H.S.

ಒಳಗೊಳ್ಳುವಂತಹ ಹಾಗೂ ಸಾಮೂಹಿಕ ಚಿಂತನೆಗೆ ಒತ್ತು ಕೊಡುವಂತಹ ರೈತ ಸಂಘಟನೆಯ ಆಗತ್ಯವಿದೆಯೆಂದು ಅವರ ಸಕ್ರಿಯೆ ಪಾಲ್ಗೊಳ್ಳುವಿಕೆಯ ಮೂಲಕ ಸ್ಪಷ್ಟಪಡಿಸಿದ್ದಾರೆ.

21ನೆಯ ಶತಮಾನದಲ್ಲಿ ಹೋರಾಟದ ಸ್ವರೂಪ ಬದಲಾಗುತ್ತಿದೆ. ಉದ್ಯೋಗ, ಕುಟುಂಬ, ರಾಜಕೀಯ, ಸಮಾಜ ಇವುಗಳ ಕೊಂಡಿಗಳನ್ನು ಸಂಬಂಧಗಳನ್ನು ಗುರುತಿಸಿಕೊಂಡು ಸಂಘರ್ಷಾತ್ಮಕ ಮಾದರಿಯಲ್ಲಿಯೇ ಹಲವಾರು ಮಹಿಳಾ ಹೋರಾಟಗಳು ನಡೆಯುತ್ತಿವೆ. ನೋವಿಗೆ, ತುಳಿತಕ್ಕೆ ಶೋಷಣೆಗೆ ಒಳಗಾದವರೇ ನೇರವಾಗಿ ಅವರವರ ಸಮಸ್ಯೆಗಳ ಸುತ್ತ ಸಕ್ರಿಯವಾಗಿ ಭಾಗವಹಿಸಿ ಹೋರಾಟ ನಡೆಸುತ್ತಿರುವುದು ಸ್ವಾಗತಾರ್ಹ ಬೆಳವಣಿಗೆ ಎಂದು ಹೇಳಬಹುದಾಗಿದೆ. ಲೈಂಗಿಕ ಕಾರ್ಯಕರ್ತೆಯರು ಧ್ವನಿ ಎತ್ತಿ ಮಾತನಾಡುತ್ತಿದ್ದಾರೆ. ಗಾರ್ಮೆಂಟ್ಸ್‌ನಲ್ಲಿ ದುಡಿಯುವ ಮಹಿಳೆಯರು ಅವರ ಹೋರಾಟದ ಮುಂಚೂಣಿಯಲ್ಲಿದ್ದು ಕಾರ್ಮಿಕ ನಾಯಕಿಯರಾಗುತ್ತಿದ್ದಾರೆ. ಪೌರಕಾರ್ಮಿಕ ಮಹಿಳೆಯರು ಕಸ ಬಾಚುವ ಬವಣೆಯ ಬಗ್ಗೆ, ಬೀದಿಯಲ್ಲಿ ನಡೆಯುವ ದೌರ್ಜನ್ಯದ ಬಗ್ಗೆ ಮಾತನಾಡಬಲ್ಲವರಾಗಿದ್ದಾರೆ. ಸಮಾನ ಕನಿಷ್ಠ ವೇತನಕ್ಕಾಗಿ ಹೋರಾಡ ಬಲ್ಲವರಾಗಿದ್ದಾರೆ. ಕುಟುಂಬದ ದೌರ್ಜನ್ಯಗಳ ವಿರುದ್ಧ ಲೆಸ್‌ಬಿಯನ್ಸ್ ಹೋರಾಟ ನಡೆಸುತ್ತಲೇ ತಮ್ಮ ಅಸ್ತಿತ್ವದ ಪ್ರಶ್ನೆಗಳನ್ನು ಎತ್ತುತ್ತಿದ್ದಾರೆ. ಮೂರನೆಯ ಲಿಂಗ ಎಂದು ಕರೆಸಿಕೊಳ್ಳುತ್ತಿರುವವರು ಸಂಘಟಿತ ರಾಗಿದ್ದಾರೆ. ಆ್ಯಸಿಡ್ ದಾಳಿಗೆ ಒಳಗಾದ ಮಹಿಳೆಯರು ಇಂದು ಸಾರ್ವಜನಿಕವಾಗಿ ಮಾತನಾಡುತ್ತಿದ್ದಾರೆ. ಒಂಟಿ ಮಹಿಳೆಯರು ತಮ್ಮ ಸಮಸ್ಯೆಗಳ ಸುತ್ತ ಸಂಘಟನೆಗಳನ್ನು ಕಟ್ಟಿಕೊಳ್ಳುತ್ತಿದ್ದಾರೆ. ಆದಿವಾಸಿ, ಕೃಷಿಕ ಮಹಿಳೆಯರು ತಮ್ಮ ಅಂತರಂಗದ ಹತಾಶೆಗಳಿಗೆ ಅಭಿವ್ಯಕ್ತಿ ನೀಡುತ್ತಿದ್ದಾರೆ. 21ನೆಯ ಶತಮಾನದಲ್ಲಿ ಹೀಗೆ ಅನೇಕ ಕ್ಷೇತ್ರದ ಮಹಿಳೆಯರು ತಮ್ಮ ಸಕ್ರಿಯ ಭಾಗವಹಿಸುವಿಕೆಯಿಂದ ಪ್ರಭುತ್ವಕ್ಕೆ, ಸಮಾಜಕ್ಕೆ, ಕೋಮುವಾದಿ ಶಕ್ತಿಗಳಿಗೆ, ಬಂಡವಾಳಶಾಹಿಗಳಿಗೆ, ಜಾಗತೀಕರಣಕ್ಕೆ ಅನೇಕ ಸವಾಲುಗಳನ್ನು, ಆತಂಕಗಳನ್ನು ಒಡ್ಡುತ್ತಿದ್ದಾರೆ. ಇವರ ಹೋರಾಟಕ್ಕೆ ಒತ್ತಾಸೆಯಾಗಿ ಮಹಿಳಾ ಗುಂಪುಗಳು ಚಾಲನೆ, ಬೆಂಬಲದಂತಹ ತಾತ್ವಿಕ ಚೌಕಟ್ಟುಗಳ ಹಿನ್ನೆಲೆಯಲ್ಲಿ ನಿಂತು ಸಹಕಾರ ನೀಡುತ್ತಿರುವುದೂ ಕೂಡಾ ಸ್ವಾಗತಾರ್ಹವಾಗಿದೆ.

ಈ ಎಲ್ಲಾ ಹೋರಾಟಗಳ ದೃಷ್ಟಿಕೋನ ಗುರುತಿಸುವ, ಇವೆಲ್ಲದರ ಮಧ್ಯೆ ಒಂದು ಕೊಂಡಿಯನ್ನು ಏರ್ಪಡಿಸುವ ಹಾಗೂ ನಾವು ನಂಬಿರುವ ಲಿಂಗರಾಜಕಾರಣದ ತಾತ್ವಿಕತೆಯಲ್ಲಿ ಈ ಎಲ್ಲಾ ಹೋರಾಟಗಳ ದೃಷ್ಟಿಕೋನಗಳನ್ನು ಒಳಗೊಳ್ಳುವುದು ಹಾಗೂ ಹೋರಾಟದ ತಂತ್ರಗಳನ್ನು ರೂಪಿಸಿಕೊಳ್ಳುವುದು ಸ್ವಾಯತ್ತ ಮಹಿಳಾ ಚಳವಳಿಯ ಅಗತ್ಯವಾಗಿದೆ.

ಮಹಿಳಾ ಸಕ್ರಿಯತೆಯ ಪರಿಣಾಮಗಳನ್ನು ಗುರುತಿಸುವಾಗ ಅದೊಂದು – Interdisciplinary activity ಎಂದೇ ನಾವು ಗುರುತಿಸಬೇಕಾಗುತ್ತದೆ. ಮಹಿಳಾ ಚಳವಳಿಯ ಸಕ್ರಿಯತೆ ಸಾಹಿತ್ಯ, ರಾಜಕೀಯ ಹಾಗೂ ಸಾಂಸ್ಕೃತಿಕ ಆಯಾಮಗಳ ಮೇಲೆ ಪ್ರಭಾವವನ್ನು ಬೀರುತ್ತಿದೆ. ಈ ಸಕ್ರಿಯತೆ ಎತ್ತುವ ಹೋರಾಡುವ ಪ್ರಶ್ನೆಗಳಿಗೆ ಯಾವುದೇ ಕಲಾಮಾಧ್ಯಮದಲ್ಲಿ ಅಭಿವ್ಯಕ್ತಿ ದೊರಕಬೇಕೆಂದರೆ ಈ ಸಕ್ರಿಯತೆಯ ಜೊತೆಗೆ ಒಂದು ನಿರಂತರ ಸಂಬಂಧವನ್ನು ಇಟ್ಟುಕೊಳ್ಳುವುದು ಅನಿವಾರ್ಯ. ಆದ್ದರಿಂದಲೇ ತಾತ್ವಿಕತೆ, ಸೃಜನಶೀಲತೆ, ಬೌದ್ಧಿಕತೆ ಇವುಗಳನ್ನು ಸಕ್ರಿಯ ಭಾಗವಹಿಸುವಿಕೆಯಿಂದ ಬೇರ್ಪಡಿಸಿ ನೋಡಲಾಗುವುದಿಲ್ಲ.

ಮಹಿಳೆಯ ಸಕ್ರಿಯತೆ, ಅವರ ಸಕ್ರಿಯ ಭಾಗವಹಿಸುವಿಕೆ, ಅವರ ಅನುಭವ ಲೋಕವನ್ನು ವಿಸ್ತಾರಗೊಳಿಸಿದೆ; ತಾತ್ವಿಕ ಚಿಂತನೆಗಳಿಗೆ ಅವರನ್ನು ಪ್ರೋತ್ಸಾಹಿಸಿದೆ. ಅವರಲ್ಲಿ ಆತ್ಮವಿಶ್ವಾಸ, ಧೈರ್ಯ ಹುಟ್ಟುಹಾಕಿದೆ ಮತ್ತು ಈ ಸಮಾಜದಲ್ಲಿ ಸ್ವತಂತ್ರ ನೆಲೆಯಲ್ಲಿ ನಿಂತು ವ್ಯವಹರಿಸುವ ದೃಷ್ಟಿಕೋನವನ್ನು ಹುಟ್ಟುಹಾಕಿದೆ. ಕಾರ್ಯಕರ್ತೆಯರ ಈ ಅನುಭವ–ಲೋಕ ಸಮಾಜದ ಮುಖ್ಯ ವಾಹಿನಿಯ ಸಂಸ್ಕೃತಿಯಲ್ಲಿ ಒಂದು ಪರಂಪರೆಯಾಗಿ ರೂಪುಗೊಳ್ಳಬೇಕೆಂದರೆ ಅವರಲ್ಲಿ ಅಧ್ಯಯನಶೀಲತೆ, ಅಂತರಂಗದ ಸಾಮರ್ಥ್ಯಗಳನ್ನು ಗುರುತಿಸಿಕೊಳ್ಳುವ ಪ್ರಕ್ರಿಯೆ ಹಾಗೂ ಅಭಿವ್ಯಕ್ತಿ ಕ್ರಮಗಳು ಹೆಚ್ಚಾಗಬೇಕಿವೆ. ಹಾಗೆಯೇ ವೈಯಕ್ತಿಕ ಸಾಧನೆಗಳನ್ನೇ ಗುರಿ ಮಾಡಿಕೊಂಡಿರುವಂತಹ ಲೇಖಕಿಯರು, ಕಲಾವಿದರು, ವಿಮರ್ಶಕರು, ರಾಜಕಾರಣಿಗಳು ಮಹಿಳಾ ಸಕ್ರಿಯ ಪಾಲ್ಗೊಳ್ಳುವಿಕೆಯ ಸಾಮೂಹಿಕ ಅನುಭವದ ಜೊತೆ ನಿರಂತರವಾದ ಸಕ್ರಿಯ ಸಂಬಂಧಗಳನ್ನು ಇಟ್ಟುಕೊಳ್ಳಬೇಕಾಗುತ್ತದೆ. ಈ ರೀತಿಯ ಅವಿಭಾಜ್ಯ ಸಂಬಂಧಗಳು ಏರ್ಪಟ್ಟಾಗ ಮಾತ್ರ ಸೃಜನಶೀಲತೆ, ಬೌದ್ಧಿಕತೆ, ಹೋರಾಟದ ಮಧ್ಯೆ ಒಂದು ತಾತ್ವಿಕ ಸಂಬಂಧ ಏರ್ಪಡಲು ಸಾಧ್ಯ ವಾಗುತ್ತದೆ.

(ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರವು ಮಹಿಳಾ ದಿನಾಚರಣೆಯ ಅಂಗವಾಗಿ ಏರ್ಪಡಿಸಿದ್ದ ವಿಚಾರ ಸಂಕಿರಣದಲ್ಲಿ ಮಂಡಿಸಲಾದ ಪ್ರಬಂಧ)

❑

ಸ್ತ್ರೀಲಯ ಭಾಷೆಯನ್ನು ಈಗಿರುವ ಪುರುಷ ಭಾಷೆಯನ್ನು ಮುರಿದುಕಟ್ಟುವ ಬಗೆಯಲ್ಲಿ ಅಥವಾ ಈ ಭಾಷೆಯ ಸ್ವೀಕರಣವನ್ನು ನಿರಾಕರಿಸುವ ಬಗೆಯಲ್ಲಿ ಕಂಡುಕೊಳ್ಳಬೇಕಾಗಿದೆ. ಪುರುಷ ಭಾಷೆಯ ಮರುಟಂಕಣೆ ಎಂದರೆ ಪುರುಷ ಭಾಷೆಯಲ್ಲಿನ ಸ್ತ್ರೀತನದ ಬಗೆಗಿನ ನೇತ್ಯಾತ್ಮಕ ಶಕ್ತಿಯನ್ನು ಒದಗಿಸಿ ಕೊಡುವುದು. ಇದು ಭಾಷೆಗಷ್ಟೇ ಸಂಬಂಧಪಟ್ಟ ಸಮಸ್ಯೆಯಾಗಿರದೆ ಸಾಂಸ್ಕೃತಿಕ, ರಾಜಕೀಯ ಆಲೋಚನಾ ವಿಧಾನ ಕೂಡಾ ಆಗಿದೆ. ಇಲ್ಲಿ ಪುರುಷಭಾಷೆಯನ್ನು ಒಡೆಯುವುದು ಎಂದರೆ ಆತ್ಯಂತಿಕವಾಗಿ ಗಂಡಿನ ಸಾಂಸ್ಕೃತಿಕ ರಚನೆಯನ್ನು ಭಂಜಿಸುವುದು. ಸ್ತ್ರೀಲಯ ಭಾಷೆಯ ಆವಿಷ್ಕಾರ ಎಂದರೆ ಅದು ಎಲ್ಲ ಬಗೆಯ ಪುರುಷಲಯ ಪ್ರಭಾವಗಳಿಂದ ಬಿಡುಗಡೆ ಹೊಂದುವ ಪ್ರಕ್ರಿಯೆಯಲ್ಲಿ ಆಗುವಂತಹುದು. ಇದು ಅಷ್ಟು ಸುಲಭದ ಕೆಲಸವಲ್ಲ. ಯಾಕೆಂದರೆ ಶತಮಾನಗಳಿಂದ ಪುರುಷ ಸಂಸ್ಕೃತಿಯೊಳಗೆ ಬದುಕು ಮಾಡಿಕೊಂಡು ಬಂದಿರುವ ಹೆಣ್ಣಿನ ಆಲೋಚನೆಗಳಲ್ಲಿ ಅವು ನುಸುಳಿ ಬರುವ ಸಾಧ್ಯತೆ ಇದೆ. .... ಈ ಸವಾಲನ್ನು ಸ್ವೀಕರಿಸುವುದೆಂದರೆ ಪುರುಷ ಮೌಲ್ಯಗಳ ನಿರಾಕರಣೆ ಮತ್ತು ಸ್ತ್ರೀ ತನದ ಮೌಲೀಕರಣದಲ್ಲಿ ಭಾಷಾ ಮೌಲ್ಯವನ್ನು ಕಟ್ಟುವುದು. ಆದುದರಿಂದ ಸ್ತ್ರೀ ಬರೆದದ್ದೆಲ್ಲ "ಸ್ತ್ರೀ ಬರಹ"ವಾಗಬೇಕಿಲ್ಲ ಎಂಬ ತತ್ತ್ವದಲ್ಲಿ ನಿಷ್ಠೆಯನ್ನಿಟ್ಟುಕೊಂಡು ಸ್ತ್ರೀಯ ಭಾಷೆಯ ಹುಟ್ಟನ್ನು ನಿರೀಕ್ಷಿಸಬೇಕಾಗಿದೆ...."

– **ಗಾಯತ್ರಿ ನಾವಡ** (ಸ್ತ್ರೀಸಂಯೋಜನೆ ಸ್ತ್ರೀಪಠ್ಯ ಮತ್ತು ಸ್ತ್ರೀಲಯ ಭಾಷೆ)

Registered with Registrar of Newspapers of India under No. KARKAN/2007/22289
'NAMMA MANASA', REGD. No. : MAG(3) NPP/399(A) / 2006-07 KA/BGS/2074/2007-09

ನಮ್ಮ ಮಾನಸ

- ಮಹಿಳೆಯರಿಗೆ ಸಂಬಂಧಿಸಿದ ಲೇಖನಗಳು, ವರದಿಗಳು ವಿಶ್ಲೇಷಣೆಗಳು, ವಿಮರ್ಶೆಗಳು, ಅನುಭವಗಳು, ಕತೆ-ಕವನಗಳನ್ನು ನಮ್ಮ ಪತ್ರಿಕೆಯಲ್ಲಿ ಪ್ರಕಟಿಸಲಾಗಿದೆ.
- ಪತ್ರಿಕೆಯು ವಿಷಯಾಧರಿತವಾಗಿದ್ದು, ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಮಹಿಳೆಯರ ಬದುಕಿನ ಮೇಲೆ ಪರಿಣಾಮ ಬೀರುವ ಸಾಮಾಜಿಕ, ರಾಜಕೀಯ, ಆರ್ಥಿಕ ವಿಚಾರಗಳನ್ನು ಚರ್ಚಿಸಲಾಗಿದೆ.
- ವಿವಾಹ, ಕುಟುಂಬದಂತಹ ಸಾಮಾಜಿಕ ಸಂಸ್ಥೆಗಳು, ಮನೆಗೆಲಸ, ಸಂಬಳರಹಿತ ದುಡಿಮೆ, ಆರ್ಥಿಕ ನೀತಿ, ಜಾತಿ, ವರ್ಗ, ಸೌಂದರ್ಯ, ಲಿಂಗ, ಹೆಣ್ತನ ಮುಂತಾದ ವಿಷಯಗಳನ್ನು ಚರ್ಚೆಗೊಳಪಡಿಸಿ ಪ್ರಕಟಿಸಲಾಗಿದೆ. ಗುತ್ತಿಗೆ ಪೌರಕಾರ್ಮಿಕರ ಹೋರಾಟಗಳಿಗೆ ಸ್ಪಂದಿಸಿ ಲೇಖನಗಳನ್ನು ಪ್ರಕಟಿಸಿದೆ.
- ಆರೋಗ್ಯ, ಲೈಂಗಿಕತೆ, ಅಪಾಯಕಾರೀ ಗರ್ಭ ನಿರೋಧಕ ಗಳು, ಆರ್ಥಿಕತೆ ಮತ್ತು ಅಭಿವೃದ್ಧಿ, ಅಭಿವೃದ್ಧಿ ಯೋಜನೆ ಗಳು ಮುಂತಾದ ವಿಚಾರಗಳನ್ನು ವಿಮರ್ಶೆಗೊಳ ಪಡಿಸಲಾಗಿದೆ.
- ಅಣ್ವಸ್ತ್ರೀಕರಣ, ಮಿಲಿಟರೀಕರಣ, ಜಾಗತೀಕರಣದಂಥ ಬೆಳವಣಿಗೆಗಳನ್ನು ಮಹಿಳಾ ದೃಷ್ಟಿಕೋನದಿಂದ ಪ್ರಶ್ನಿಸಲಾಗಿದೆ.
- ಇತರ ಪ್ರಜಾಸತ್ತಾತ್ಮಕವಾದ ಸಂಘಟನೆಗಳೊಡನೆ ಕೋಮುವಾದ, ಸಮಾನ ನಾಗರಿಕ ಸಂಹಿತೆ, ಮೀಸಲಾತಿ, ಲೈಂಗಿಕತೆ, ಪರಿಸರ, ಸ್ಥಳಾಂತರ ಮುಂತಾದ ವಿವಾದ ಗಳನ್ನು ಕುರಿತ ಚರ್ಚೆಗಳಲ್ಲಿ, ಆಂದೋಲನಗಳಲ್ಲಿ ಪಾಲ್ಗೊಳ್ಳಲಾಗಿದೆ.
- ಸ್ವಸಹಾಯ ಸಂಘಗಳನ್ನು ರಚಿಸುವ ಮೂಲಕ ಮಹಿಳೆ ಯರ ಸಬಲತೆಗೆ ಪ್ರೋತ್ಸಾಹ ನೀಡಲಾಗಿದೆ.
- ನಮ್ಮದೇ ಮಿತಿಯಲ್ಲಿ ತೊಂದರೆಗೊಳಗಾದ ಮಹಿಳೆ ಯರಿಗೆ ಸಲಹೆ, ನೈತಿಕ ಬೆಂಬಲಗಳಲ್ಲದೆ ಕಾನೂನಿನ ನೆರವನ್ನು ನೀಡುತ್ತಿದ್ದೇವೆ.
- ಮಹಿಳೆಯರು ತಾವಿದ್ದೆಡೆಯಲ್ಲಿ ಮಹಿಳಾ ಪತ್ರಿಕೆಗಳನ್ನು ಹೊರತರಲು ಪ್ರಯತ್ನಿಸಿದಲ್ಲಿ, ಗುಂಪುಗಳನ್ನು ರಚಿಸ ಬೇಕಾದಲ್ಲಿ ಸಹಕರಿಸಲು ಉದ್ದೇಶಿಸಿದ್ದೇವೆ.

Registered
Magazine

*Posted on 9th of every month
at Chamarajpet Post Office*

ವಿಳಾಸ :
ನಮ್ಮ ಮಾನಸ
114/5, 9ನೇ ತಿರುವು, 2ನೇ ಮುಖ್ಯರಸ್ತೆ
ಚಾಮರಾಜಪೇಟೆ
ಬೆಂಗಳೂರು - 560 018